MYSORE LEGISLATIVE ASSEMBLY

THIRTEENTH DAY

Saturday, 9th March 1963.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

BUDGET ESTIMATES FOR 1963-64 GENERAL DISCUSSION

(Continued)

Mr. SPEAKER.—Sri Sirasappa may speak now.

Sri C. J. MUCKANNAPPA (Sira).—I have not concluded.

Mr. SPEAKER.—I am sorry; I thought you had concluded. But I cannot give you the Hon'ble member any more time.

Sri C. J. MUCKANNAPPA.—I have not yet concluded.

Mr. SPEAKER.—I have told the Hon'ble Member already that I presumed that he had concluded as I have done in the case of others, so it is with the Hon'ble Member.

ಶ್ರೀ ಸಿರ್ಸಪ್ಪ ಇಜಾರಿ (ಹರ್ಪನಹಳ್ಳಿ).—ಸ್ವಾಮಿ, 1963–64ನೇ ಇಸವಿ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸುತ್ತಾ ಮಾನ್ಯ ಆರ್ಥಿಕ ಮಂತ್ರಿಗಳಾದ ಜತ್ತಿಯವರನ್ನು ಅಭಿಮಾನ ದಿಂದ ವಂದಿಸುತ್ತೇನೆ. ಮುಂಗಡ ಪತ್ರಕ್ಕೆ ನನ್ನ ಪೂರ್ಣ ಸ್ವಾಗತವನ್ನು ನೀಡುತ್ತೇನೆ.

ಕಳೆದ ಸಾಲಿನ ಆಯವ್ಯಯದ ಪತ್ರವನ್ನು ಮಂಡಿಸಿ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಾಗ ಚೀಣ ಆಕ್ರಮಣ ನಮ್ಮ ಮೇಲೆ ಬಂದಿದ್ದು ನಮಗೆ ಗೊತ್ತಿತ್ತು. ಅದರ ಮೇಲೆ ದೇಶದ ಆರ್ಥಿಕ ಪರಿಸ್ಥಿತಿ ಏನುಆಗ ಬಹುದೆಂಬ ವಿವೇಚನೆ ಇತ್ತಾಗ, ಬಹುಷಃ ಹೆಚ್ಚುವರಿ ತೆರಿಗೆಗಳನ್ನು ಹಾಕಬಹುದೆಂಬ ಅನುಮಾನ ನಮಗೆ ಉಂಟಾಗಿತ್ತು. ಜನತೆ ಸಹ ಅದೇ ದಿಶೆಯಲ್ಲಿ ಯೋಚನೆ ಮಾಡಿ ಹೆಚ್ಚುವರಿ ತೆರಿಗೆಗಳನ್ನು ಸರ್ಕಾರ ವಿಧಿಸಬಹುದು ಎನ್ನುವ ಭಯವನ್ನು ಇಟ್ಟು ಕೊಂಡಿದ್ದರು. ಇದರಲ್ಲಿರುವ ಹೇಳಿಕೆಗಳನ್ನು ನಾವು ನೋಡಿದಾಗ ಸುಮಾರು 4 ಕೋಟಿ ರೂಪಾಯಿ ಕೊರತೆ ನಮ್ಮ ಯೋಜನೆಗೆ ಉಂಟಾಗಬಹುದು, ಈ ನಾಲ್ಕು ಕೋಟಿ ರೂಪಾಯಿಗಳನ್ನು ತೆರಿಗೆಗಳ ಮೂಲಕವಾಗಿ ನಾವು ಮತ್ತೆ ಸಂಪಾದಿಸುವ ಪ್ರಸಂಗ ಬರಬಹುದು ಎಂಬ ಭೀತಿ ನಮಗೆ ಇತ್ತು. ಆದರೆ ದೇಶದ ಪರಿಸ್ಥಿತಿಯನ್ನು ಅನುಸರಿಸಿ ತೆರಿಗೆಗಳನ್ನು ಹಾಕದೆ ಈ ಒಂದು ಮುಂಗಡ ಪತ್ರವನ್ನು ಮಾನ್ಯ ಅರ್ಥ ಮಂತ್ರಿಗಳು ನಮ್ಮ ಮುಂದೆ ಈಗ ಸಾದರ ಪಡಿಸಿದ್ದಾರೆ. ಅದಕ್ಕಾಗಿ ಇವರು ಅಭಿವಂದನೆಗೆ ಪಾತ್ರರು ಎಂದು ಹೇಳಿದರೆ ಬಹುಷಃ ತಪ್ಪಾಗಲಿಕ್ಕಿಲ್ಲ ಎಂದು ನನ್ನ ಭಾವನೆ.

(ಶ್ರೀ ಸಿರ್ಸಪ್ಪ ಇಜಾರಿ)

ಈ ಆಯುವ್ಯಯ ಮುಂಗಡ ಪತ್ರವನ್ನು ನಾವು ನೋಡಿದರೆ, ಯೋಚಿಸಿದಾಗ ರಾಜ್ಯಪಾಲರ ಭಾಷಣದ ಕಡೆಗೆ ನಮ್ಮ ಲಕ್ಷ್ಯ ಹೋಗಬೇಕಾಗುತ್ತದೆ. ಪ್ರತಿ ವರ್ಷದ ಪ್ರಥಮ ಅಧಿವೇಶನದಲ್ಲಿ ಭಾಷಣ ಮಾಡುತ್ತಾ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಯಾವ ಯಾವ ಭರವಸೆಗಳನ್ನು ಜನತೆಗೆ ಕೊಟ್ಟಿದೆ ಯಾವ ಯಾವ ಭರವಸೆಗಳನ್ನು ನಾವು ಪೂರೈಸಿದ್ದೇವೆ. ಯಾವ ಭರವಸೆಗಳನ್ನು ಪೂರೈಸಲಿಕ್ಕೆ ಬೇಕು, ನಮಗೆ ಇದ್ದ ತೊಂದರೆ ಅಡ್ಡಿ ಆತಂಕಗಳೇನು ವರ್ಷದ ಕೊನೆಯಲ್ಲಿ ನಮ್ಮ ಆಯವ್ಯಯ ಪರಿಸ್ಥಿತಿ ಯಾವ ರೀತಿಯಲ್ಲಿ ಇರಬಹುದು. ಇವುಗಳೆಲ್ಲ ವನ್ನು ವಿವೇಚನೆ ಮಾಡಿ ಮುಂದಿನ ವರ್ಷ ಎಂತಹ ಕ್ರಮವನ್ನು ತೆಗೆದು ಕೊಳ್ಳಬೇಕು, (the policies of the Government in a broad sense) ನಾವು ಯಾವ ಯೋಜನೆಯನ್ನು ಈ ವರ್ಷ ಕಾರ್ಯ ರೂಪಕ್ಕೆ ತರಬೇಕೆಂದಿದ್ದೇವೆ. ಅನ್ನುವುದನ್ನು ಅವರು ತಮ್ಮ ಭಾಷಣದಲ್ಲಿ ಹೇಳುವರು. ದೇಶದ ಪರಿಸ್ಥಿತಿ ಹಾಗೂ ನಮ್ಮ ದೇಶದ ಅಭಿವೃದ್ಧಿ ಯಾವ ದಿಶೆಯಲ್ಲಿ ಸಾಗಿದೆ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ನೋಡುತ್ತೇವೆ ಆ ದಿನ ಆಯುವ್ಯಯ ಮುಂಗಡ ಪತ್ರವನ್ನು ಮಂಡಿಸಿದಾಗ ಎರಡನ್ನೂ ಜೊತೆಗೆ ನೋಡಿಕೊಂಡು ನಾವು ದೇಶದ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಆಲೋಚಿಸಿ ಎಲ್ಲ ಸಮಸ್ಯೆಗಳಿಗೂ ಗಮನ ಕೊಟ್ಟು ದೇಶದ ಅಭಿವೃದ್ಧಿಗೆ ಸಹಾಯವಾಗುವಂತಹ ಸೂಚನೆಗಳನ್ನು ಸರ್ಕಾರಕ್ಕೆ ಮುಂದಿಸಬೇಕಾಗುತ್ತದೆ.

ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ Resources of the State ನಮ್ಮ ದೇಶ ಹಣಕಾಸಿನ ಸ್ಥಿತಿಯಲ್ಲಿ ಯಾವ ರೀತಿಯಲ್ಲಿದೆ. ಅದನ್ನು ಹೆಚ್ಚುವರಿ ಯಾವ ರೀತಿಯಲ್ಲಿ ಮಾಡಿ ಕೊಳ್ಳಬಹುದು. ಹಣಕಾಸು ಬೇಕಾದುದನ್ನು ನಾವು ಪಡೆಯಲಿಕ್ಕೆ ಯಾವ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೆಂಬುದನ್ನು ಸಹ ನಮ್ಮ ಮುಂದಿಟ್ಟಿದ್ದಾರೆ. ಇವುಗಳೆಲ್ಲವನ್ನೂ ನೋಡಿದ ನಂತರದಲ್ಲಿ ಬಹಳ ಪ್ರಾಮುಖ್ಯವಾಗಿ ಎಲ್ಲರ ಗಮನವನ್ನೂ ಪ್ರಪ್ರಥಮವಾಗಿ ಸೆಳೆಯತಕ್ಕಂಥ ನದಿ ನೀರಿನ ಹಂಚಿಕೆ ಬಗ್ಗೆ ನಾವು ಯೋಚನೆ ಮಾಡ ಬೇಕಾಗಿದೆ. ಮಾನ್ಯಸದಸ್ಯರುಗಳಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ, ದೇಶದಾದ್ಯಂತ ಈ ಕೃಷ್ಣ ಗೋದಾವರಿ ಮತ್ತು ಕಾವೇರಿ ನದಿ ನೀರಿನ ವಿವಾದದ ವಿಷಯ ಸಾಕಷ್ಟು ಚರ್ಚೆಗೆ ಅವಕಾಶಕೊಟ್ಟಿದೆ. ಈ ಒಂದು ಸಮಸ್ಯೆಯನ್ನು ಇತ್ಯರ್ಥಿಸುವವರಿಗೆ ನಮ್ಮ ಆಹಾರ ಪರಿಸ್ಥಿತಿಯನ್ನು ಕಡೆಗಾಣಿಸುವಂತಿಲ್ಲ. ಈ ಒಂದು ಸಮಸ್ಯೆಯ ಬಗ್ಗೆ ನಾವು ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆಯೋ, ಅಷ್ಟೇ ಅದಕ್ಕೆ ಸರಿಸಮಾನವಾದ ಪ್ರಾಮುಖ್ಯತೆಯನ್ನು ಆಹಾರಬೆಳೆಯುವುದರಲ್ಲಿ, ಅದರ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲಿ ಗಮನ ಕೊಡಬೇಕಾದುದು ಅವಶ್ಯಕವೆಂದು ಎಲ್ಲರೂ ನಮಗೆ ಹೇಳಿದ್ದಾರೆ. ಆ ಕಾರಣದಿಂದಾಗಿ ಆಹಾರ ಸಾಮಗ್ರಿಗಳಲ್ಲಿ ನಾವು ಸಾಕಷ್ಟು ಉತ್ಪನ್ನವನ್ನು ಹೆಚ್ಚಿಸಿ ಕೊಂಡು ಈ ರಾಜ್ಯ ಪರಿಪೂರ್ಣವಾಗಿದೆ. ಆಹಾರದ ಕೊರತೆ ಉಂಟಾಗಿಲ್ಲವೆಂದು ನಿರ್ಭರವಾಗಿ ಹೇಳತಕ್ಕಂಥ ಪರಿಸ್ಥಿತಿಗೆ ಬರಬೇಕಾದರೆ, ನದಿ ನೀರಿನ ಹಂಚಿಕೆ ಸುವ್ಯವಸ್ಥಿತವಾಗಿ ನ್ಯಾಯವಾಗಿ ಎಲ್ಲಾ ರಾಜ್ಯಗಳಿಂದ ಆಗದೆ ಹೋದರೆ ನಾವು ನಮ್ಮ ರಾಜ್ಯದಲ್ಲಿ ಆಹಾರದ ಒಂದು ಉತ್ಪಾದನೆಯಲ್ಲಿ ಸ್ವಯಂ ಸಾಮರ್ಥ್ಯವನ್ನು ಪಡೆಯಲಿಕ್ಕೆ ಸಾಧ್ಯವಿಲ್ಲವೆಂದು ನಿರ್ದಿಷ್ಟವಾಗಿ ಹೇಳಬಹುದು.

ಕಳೆದ 8-10 ವರ್ಷಗಳಿಂದ ನಾನು ಅನೇಕ ಸಂದರ್ಭಗಳಲ್ಲಿ ಕರ್ನಾಟಕದಲ್ಲಿ ತುಂಗಭದ್ರ, ಮಲಪ್ರಭ, ಘಟಪ್ರಭ ಕೃಷ್ಣ ಮುಂತಾದ ಅನೇಕ ನದಿ ಯೋಜನೆಗಳನ್ನು ಕೈಗೊಳ್ಳುವುದು ಅವಶ್ಯಕವೆಂದು ಹೇಳಿದ್ದೇನೆ. ಏತಕ್ಕೆಂದರೆ ಬಹುಶಃ ನಾವು ಪಟ್ಟತೊಂದರೆ, ನಾವು ಈಗ ಅನುಭವಿಸತಕ್ಕಂತ ಲುಕ್ಸಾನು ನಮ್ಮ ರಾಜ್ಯದ ಇನ್ನುಳಿದ ಭಾಗಗಳಿಗೆ ಇರಲಿಕ್ಕಿಲ್ಲ. ತಮಗೆ ಗೊತ್ತಿರುವಹಾಗೆ ತುಂಗಭದ್ರ ಯೋಜನೆ 1856ರಲ್ಲಿ ನಮ್ಮ ಜನತೆ ಮುಂದೆ ಬಂದಿತು. ಯಾವಾಗಲೂ ಕ್ಷಾಮ ಪೀಡಿತವಾದ ಬಳ್ಳಾರಿ ಜಿಲ್ಲೆ ಮತ್ತು ಇನ್ನುಳಿದ ಕೆಲವು ಭಾಗಗಳನ್ನು ಅಭಿವೃದ್ಧಿಗೊಳಿಸಿ ಅಲ್ಲಿಯ ಕ್ಷಾಮವನ್ನು ನಿವಾರಣೆ ಮಾಡುವುದಕ್ಕಾಗಿ, ತುಂಗಭದ್ರ ಯೋಜನೆ ಅವಶ್ಯ ಎನ್ನುವ ಒಂದು ನಿರ್ಧಾರಕ್ಕೆ ಸರ್ಕಾರ ಮತ್ತು ಜನತ ಬಂದರು. ಅದು ಮುಂದೆ ಕಾರ್ಯ ರೂಪಕ್ಕೆ ಬಂದಿತು. ತಮಗೆ ಗೊತ್ತಿರುವಹಾಗೆ 1937ರಲ್ಲಿ ಮೊದಲನೇ ಸಾರಿ ಕಾಂಗ್ರೆಸ್ ಪಕ್ಷದವರು ಅಧಿಕಾರವನ್ನು ವಹಿಸಿಕೊಂಡಾಗ ತುಂಗಭದ್ರ ಮತ್ತು ತೆರ್ರಗಡ್ಡ ಈ ಎರಡು ಪ್ರಾಜೆಕ್ಟುಗಳನ್ನು ಮದ್ರಾಸು ಸರ್ಕಾರದವರು ಮಂಜೂರು ಮಾಡಿದರೂ ಒಂದೆರಡು ವರ್ಷಗಳಲ್ಲಿ ಅದಕ್ಕೆ ಮುನ್ಸೂಚನೆಗಾಗಿ ಮಾಡಬೇಕಾದ ಕಾರ್ಯಕ್ರಮಗಳನ್ನು ನಾವು ಅಳವಡಿಸಿಕೊಳ್ಳುವಾಗ ಮತ್ತೆ ಕಾಂಗ್ರೆಸ್ ಸರ್ಕಾರ ರಾಜೀನಾಮೆ ಕೊಡುವ ಪ್ರಸಂಗ ಬಂದಿತು. 2½ ವರ್ಷದಿಂದ ಮಾಡಿಕೊಂಡ ಯೋಜನೆಯನ್ನು ಬಿಟ್ಟು ಬಿಟ್ಟು, ಪ್ರೈಮರಿ ಸ್ಟೇಜ್‌ಗಳಲ್ಲಿದ್ದ ಯೋಜನೆಗಳನ್ನು ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡರು. ಮುಂದೆ ಜನತಾ ಪ್ರತಿನಿಧಿ ಸರ್ಕಾರ ಇಲ್ಲದಿರುವಾಗ ಗವರ್ನರ್ ಆಡಳಿತ ಮದ್ರಾಸಿನಲ್ಲಿ ನಡೆ

ಯುತ್ತಿರುವಾಗ್ ಅಡ್‌ವೈಸರಿ ಕೌನ್ಸಿಲ್ಲಿನವರು, ಪ್ರತಿನಿಧಿಗಳು ಚಳುವಳಿಯಲ್ಲಿ ಭಾಗವಹಿಸಿ ಜೈಲಿನಲ್ಲಿರುವಾಗ ತುಂಗಭದ್ರ ಪ್ರಾಜೆಕ್ಟ್ ರೂಢಿಗೊಂಡಂಥಾದ್ದನ್ನು ಸಂಪೂರ್ಣವಾಗಿ ಮಾರ್ಪಾಟು ಮಾಡಿ ಹಿಂದಲಿನ ನಾಲ್ಕು ಜಿಲ್ಲೆಗಳಿಗೆ ಆಹಾರದ ಕೊರತೆಯನ್ನು ನೀಗುವುದಕ್ಕೆ 4 ಜಿಲ್ಲೆಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಯೋಜನೆಯನ್ನು ಸಿದ್ಧಪಡಿಸಿ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಹೋದರು 4-5 ವರ್ಷಗಳು ಹೋಗಿ ಜನತಾ ಪ್ರತಿನಿಧಿಗಳು ಹೊರಗೆ ಬರುವಾಗ ತುಂಗಭದ್ರ ಪೂರ್ಣ ಚಿತ್ರ ಬದಲಾವಣೆ ಹೊಂದಿತ್ತು. ಯಾವ ಒಂದು ತುಂಗಭದ್ರ ಪ್ರಾಜೆಕ್ಟನ್ನು ಬಳ್ಳಾರಿ ಜಿಲ್ಲೆಯ ಕಮಲಾಪುರದಲ್ಲಿ ಹಾಕಿದ್ದರೆ, ಅದರ ಪೂರ್ಣ ಲಾಭ ಜಿಲ್ಲೆಗೆ ಉಂಟಾಗುತ್ತಿತ್ತು. ಆ ಸ್ಥಳವನ್ನು ಬದಲಾಯಿಸಿ ಹೊಸಪೇಟೆ ಸಮೀಪದಲ್ಲಿ ಹಾಕಿ, ಅದರಲ್ಲಿ ಅರ್ಧಕ್ಕಿಂತ ಕಡಿಮೆ ಲಾಭ ಬಳ್ಳಾರಿಗೆ ಉಂಟಾಗುವಂತೆ ಮುಂದಿನ ಆಂಧ್ರ ಪ್ರದೇಶದ ಜಿಲ್ಲೆಗಳಿಗೆ ನೀರು ದೊರಕುವಂತೆ ಯೋಜನೆಯನ್ನು ಅವರು ಕಾರ್ಯರೂಪಕ್ಕೆ ತೆಗೆದುಕೊಂಡು ಬಂದು, 3-4 ವರ್ಷಗಳಲ್ಲಿ ಎರಡು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ; 7-8 ವರ್ಷಗಳು ನಮ್ಮ ಪ್ರಾಜೆಕ್ಟಿಗೆ ಹೆಚ್ಚಿನ ಲಾಭ ಸಿಗುವಂತೆ ಯೋಜನೆ ಮಾರ್ಪಾಟಾಗಲಿ ಎಂದು ಸತತವಾಗಿ ಪ್ರಯತ್ನ ಮಾಡಿದರೂ ಯಾವ ಪ್ರಯೋಜನವೂ ಆಗದೆ ಹೋಯಿತು.

ಕೃಷ್ಣಾ, ಗೋದಾವರಿ ಮತ್ತು ಕಾವೇರಿ ನದಿಗಳ ನೀರಿನ ಹಂಚಿಕೆ ಬಗ್ಗೆ ಇದೇ ರೀತಿ ತಡ ಮಾಡಿದಲ್ಲಿ ಕೆಲವು ಕಾಲ ಹಿಂದುಳಿದ ಪ್ರದೇಶಗಳಿಗೆ ಆ ಸರ್ಕಾರದವರು ಹಣ ಖರ್ಚುಮಾಡಿ ಸೌಲಭ್ಯಗಳನ್ನು ಒದಗಿಸಿ ಕೊಟ್ಟರೆ ಆ ನಂತರ ಯಾರಾದರೂ ಒಂದು ಪಂಚಾಯ್ತಿ ಹೇಳುವವರು ಹೇಳಬಹುದು ಖರ್ಚು ಮಾಡಿದನ್ನು ಬಿಡಲಿಕ್ಕೆ ಆಗಲಿಕ್ಕಿಲ್ಲ ಆ ಕಾರಣ ಆ ಯೋಜನೆಗಳು ಮುಂದುವರಿಯಲಿ ಎಂದು. ಬಹುಶಃ ಈ ದಿವಸ ಪತ್ರಿಕೆಯಲ್ಲಿ ಬಂದ ವರದಿ ಓದಿರಬಹುದು. ಕೃಷ್ಣಾ ನದಿಯಲ್ಲಿ 1,700 ಚಿಲ್ಲರೆ ಟಿ.ಎಂ.ಸಿ.ಎಫ್.ಟಿ. ಸಿಕ್ಕಬಹುದು. ಈಗಾಗಲೇ ಆಗಿರತಕ್ಕ ಕಮಿಟ್‌ಮೆಂಟ್ ಪ್ರಕಾರ ಸುಮಾರು 700 ಟಿ.ಎಂ.ಸಿ.ಎಫ್.ಟಿ. ಉಪಯೋಗವಾಗಿದೆ ಇನ್ನುಳಿದ 1,000 ಟಿ.ಎಂ.ಸಿ.ಎಫ್.ಟಿ. ನಲ್ಲಿ ನಾಗಾರ್ಜುನ ಸಾಗರದ ಎರಡನೇ ಹಂತ ಮತ್ತು ಶ್ರೀ ಶೈಲದ ಯೋಜನೆಯನ್ನು ಕೈಕೊಳ್ಳುವುದರಿಂದ ಸುಮಾರು 500-600 ಟಿ.ಎಂ.ಸಿ.ಎಫ್.ಟಿ. ನೀರು ಖರ್ಚಾಗಲಿದೆ. ಉಳಿದಿದ್ದರಲ್ಲಿ ಸುಮಾರು 170-175 ಟಿ.ಎಂ.ಸಿ.ಎಫ್.ಟಿ. ಮಹಾರಾಷ್ಟ್ರದವರು ಉಪಯೋಗ ಮಾಡಿಕೊಂಡರೆ ನಮಗೆ ಉಳಿಯುವುದು 125-130 ಟಿ.ಎಂ.ಸಿ.ಎಫ್.ಟಿ. ಇದರಲ್ಲಿ 2-3 ಪ್ರದೇಶಗಳಿಗೆ ಹಂಚಿಕೆಯಾಗಿ ಉಪಯೋಗವಾಗಬೇಕಾಗಿದೆ. ಅದಕ್ಕೆ ಬಹಳ ತೀವ್ರತೆಯಿಂದಲೂ ಮತ್ತು ನಮ್ರತೆಯಿಂದಲೂ ಮುಖ್ಯ ಮಂತ್ರಿಗಳಲ್ಲಿ ಮತ್ತು ನಮ್ಮ ಸರ್ಕಾರದವರಲ್ಲಿ ಒಂದು ಬಿನ್ನಹ ಮಾಡುತ್ತಾ ಇದ್ದೇನೆ. ನಮ್ಮ ದೇಶಕ್ಕೆ ಆಗಬಹುದಾದ ಈ ಹಾನಿಯನ್ನು ತಪ್ಪಿಸಲಿಕ್ಕೆ ಅವರು ಸತತ ಪ್ರಯತ್ನಮಾಡಿ ತೀವ್ರವಾದ ಕಾರ್ಯಕ್ರಮಗಳನ್ನು ಕೈಕೊಂಡು ಈ ದೇಶಕ್ಕೆ ಸಂಪೂರ್ಣಹಿತ ನದೀ ನೀರಿನಿಂದ ಸಿಕ್ಕುವಂತೆ ಮಾಡಬೇಕು. ಅದಕ್ಕೆ ಬರೀ ಈ ಪಕ್ಷದವರೇ ಅಲ್ಲ ಆ ಕಡೆ ಪಕ್ಷದವರೂ, ಇನ್ನುಳಿದ ಸದಸ್ಯರು ಮತ್ತು ಸಭೆಯ ಹೊರಗಿನ ಜನತೆಯ ಸಂಪೂರ್ಣ ಬೆಂಬಲ ಸರ್ಕಾರಕ್ಕೆ ಇದೆ. ಸರ್ಕಾರಕ್ಕೆ ಮಾಡಬೇಕಾದ ತ್ಯಾಗವನ್ನು ಮಾಡಲಿಕ್ಕೆ ಜನತೆ ಸಿದ್ಧರಾಗಿದ್ದಾರೆ ಎಂಬ ಭರವಸೆಯನ್ನು ನೀಡುತ್ತಾ ಇದ್ದೇನೆ.

ಯಾವಾಗಲೂ ನೀರಿನ ಯೋಜನೆಗಳ ಬಗ್ಗೆ ಮಾತನಾಡುವಾಗ ಬರೀ ದೊಡ್ಡ ದೊಡ್ಡ ಯೋಜನೆಗಳನ್ನು 100-150-200 ಕೋಟಿ ರೂಪಾಯಿ ಖರ್ಚಾಗಬಹುದಾದಂಥ ಯೋಜನೆಗಳಿಗೆ ಲಕ್ಷ್ಯ ಕೊಡುತ್ತಾ ಇದ್ದೇವೆ. ಸಣ್ಣ ಯೋಜನೆಗಳಿಗೆ ಲಕ್ಷ್ಯ ಕೊಡುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ ವಿಜಯನಗರದ ಸಂಸ್ಥಾನ ಇದ್ದಾಗ, ಆ ರಾಜ್ಯ ನಮ್ಮ ಕೈಯಲ್ಲಿದ್ದು ಬಹಳ ಉತ್ತಮ ರೀತಿಯಿಂದ ರಾಜ್ಯಭಾರವನ್ನು ನಡೆಸಿಕೊಂಡು ಹೋಗುತ್ತಾ ಇದ್ದಾಗ ಸುಮಾರು 290 ಸಣ್ಣ ಸಣ್ಣ ಯೋಜನೆಗಳನ್ನು ತುಂಗಭದ್ರಾ ನದಿಗೆ ಮಾಡಲಾಗಿತ್ತು. 1000, 5000, 10,000, 50,000 ಎಕರೆಗೆ ನೀರು ಕೊಡಬಹುದಾದಂಥ ಸಣ್ಣ ಸಣ್ಣ ಯೋಜನೆಗಳನ್ನು ಮಾಡಿ ಆ ಕಾಲದಲ್ಲಿ ಕಟ್ಟಿದ್ದರು. ಈಗ ಅವು ಶಿಥಿಲವಾಗಿವೆ. ಪ್ರಯೋಜನಕ್ಕೆ ಬಾರದಂತಾಗಿವೆ. ಆದ್ದರಿಂದ ದೊಡ್ಡ ಯೋಜನೆಗಳ ಜೊತೆಯಲ್ಲಿ ಸಣ್ಣ ಸಣ್ಣ ಯೋಜನೆಗಳನ್ನು upper reaches of the river ಮತ್ತು ಇತರ ಕಡೆಗಳಲ್ಲಿ ಹಳ್ಳಕೊಳ್ಳಗಳಲ್ಲಿ, ಪೆರೆನಿಯಲ್ ಸಪ್ಲೈ ಸಿಕ್ಕುವಂತಹ ಹಳ್ಳಗಳು ಇವೆ. ಅಂತಹ ಕಡೆ ವಿದ್ಯುಚ್ಛಕ್ತಿಯನ್ನುಪಯೋಗಿಸಿಕೊಂಡು ಒಂದು ಕಮ್ಯೂನಿಟಿ ಲಿಫ್ಟ್ ಇರಿಗೇಷನ್ ಸಿಸ್ಟಂ ಮಾಡಿಕೊಂಡು ನೂರಾರು ಅಥವಾ ಸಾವಿರಾರು ಎಕರೆಗಳು ನೀರು ಉಣ್ಣುವಂತೆ ಮಾಡುವ ಈ ಸಣ್ಣ ಕಾರ್ಯಕ್ರಮಗಳನ್ನು ಕೈಬಿಟ್ಟರೆ ಬಹುಶಃ ನೀರಾವರಿಯಿಂದ ಸಿಕ್ಕಬಹುದಾದ ಆಹಾರ ಪದಾರ್ಥ ಸಿಕ್ಕಲಿಕ್ಕಿಲ್ಲ ಎಂದು ಹೇಳಬಯಸುತ್ತೇನೆ. ಈ ಒಂದು ನೀರಾವರೀ ಯೋಜನೆಗಳನ್ನು ಕೈಕೊಳ್ಳಬೇಕೆಂದು ಒಂದು ಮಾತನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕಾಗಿದೆ. ನಾವು ಇನ್‌ವೆಸ್ಟಿಗೇಟ್ ಮಾಡಿಸುತ್ತೇವೆ, ಎಸ್ಟಿಮೇಟ್ ಮಾಡಿಸುತ್ತೇವೆ. ಅನಂತರ ಅನೇಕ ಕೋಟಿ ರೂಪಾಯಿಗಳ ಖರ್ಚಿನಿಂದ ಆ ಯೋಜನೆಗಳನ್ನು ಪೂರೈಸುತ್ತೇವೆ. ನಮಗೆ ಅದರಿಂದ ಸಿಕ್ಕತಕ್ಕ ಪ್ರತಿಫಲ ಎಷ್ಟು ಸಿಕ್ಕುತ್ತದೆ ಎಂಬ ಕಡೆಗೆ

(ಶ್ರೀ ಸಿರ್ಸಪ್ಪ ಇಜಾರಿ)

ಲಕ್ಷ್ಯ ಕೊಡುವುದಿಲ್ಲ. ತುಂಗಭದ್ರಾ ಯೋಜನೆಯ ವಿಚಾರವಾಗಿ ಹೇಳಬೇಕಾದರೆ ಅದರಿಂದಾಗಿ ಯಾರಿಗೂ ಸಂತೋಷವಿಲ್ಲ. ರೈತರಿಗೆ ಸುಖ ಸಂತೋಷವಿಲ್ಲ ತನ್ನ ಬೆಳೆ ಹೆಚ್ಚಿಸಿದ್ದೇನೆ ಅಂತ. ಸರ್ಕಾರಕ್ಕೆ ಸುಖ ಸಂತೋಷ ಇಲ್ಲ ನಮಗೆ ಬರಬೇಕಾದ ಪ್ರತಿಫಲ ದೊರಕುತ್ತಿದೆ ಎಂದು. 4-8 ವರ್ಷ ಗಳಿಂದ ಸತತವಾದ ಆಂದೋಳನ ಬಳ್ಳಾರಿ ಜಿಲ್ಲೆಯವರಿಂದ ನಡೆದದ್ದು ಸರ್ಕಾರದವರ ಗಮನಕ್ಕೆ ಆಗಿಂದ್ದಾಗ್ಯೆ ಬಂದಿದೆ. ನೀವು ವಾಟರ್ ಟ್ಯಾಕ್ಸ್ ಹಾಕಿದ್ದೀರಿ, ನೀರು ಕೊಟ್ಟಿಲ್ಲ, ಅನ್‌ಅಥರೈಸ್ಡ್ ಕಲ್ಟಿವೇಷನ್‌ಗೆ ಅವಕಾಶ ಕೊಟ್ಟಿದ್ದೀರಿ, ತೊಂದರೆಯಾಗಿದೆ, ಡ್ರೈಕಂವೆಟ್ ಇರಿಗೇಷನ್ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಅನೇಕ ಸಲ ದೂರು ಅಲ್ಲಿಂದ ಬಂದದ್ದು ಗೊತ್ತಿದೆ. ಆಗಬೇಕಾದ ಹಿತ ಜನತೆಗೆ ಆಗಿಲ್ಲ, ಬರಬೇಕಾದ ವರಮಾನ ಸರ್ಕಾರಕ್ಕೆ ಬಂದಿಲ್ಲ. ಒಟ್ಟಾರೆ ನೋಡುವುದಾದರೆ ಆಹಾರದ ಉತ್ಪಾದನೆಯೂ ಸಹ ಹೆಚ್ಚಾಗಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಸರಿ ಯಾದ ಪ್ರತಿಫಲ ದೊರೆಯುವಂತಾಗಲು ಮಾಡಬೇಕಾದ ಈ ಕೆಲವು ಅಂಶಗಳನ್ನು ಅವರು ಗಮನ ದಲ್ಲಿಟ್ಟುಕೊಂಡು ಕಾರ್ಯ ಪ್ರವೃತ್ತರಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದರ ಮೇಲೆ ಅನೇಕ ಕೆರೆಗಳು ನಮ್ಮ ಸಂಸ್ಥಾನದಲ್ಲಿರುವುದು ತಮಗೆ ಗೊತ್ತಿದೆ, ಮಳೆಯ ನೀರಿನಿಂದ ಭರ್ತಿಯಾದ ಆ ಕೆರೆಗಳ ನೀರಿನಿಂದ ಸ್ವಲ್ಪಮಟ್ಟಿಗೆ ವ್ಯವಸಾಯ ಮಾಡಿಕೊಳ್ಳುತ್ತಾ ಇದ್ದೇವೆ. ಒಂದು ಪಕ್ಷ ಮಳೆ ಬರದೇ ಹೋದಲ್ಲಿ ಆದರ ಕೆಳಗೆ ಇರುವ ಗದ್ದೆಯಲ್ಲಿ ಯಾವ ಬೆಳೆ ಯನ್ನು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಮದರಾಸಿನಲ್ಲಿ ಟ್ಯೂಬ್‌ವೆಲ್ಸ್ ಮುಖಾಂತರ ಇರಿಗೇಷನ್ ಮಾಡಿ ಎಷ್ಟು ಪ್ರತಿಫಲವನ್ನು ಅವರು ಪಡೆದಿದ್ದಾರೆ ಎಂಬುದು ತಮಗೆ ಈಗಾಗಲೇ ಗೊತ್ತಿರ ಬಹುದು. ಅದೇ ರೀತಿಯಲ್ಲಿ ನಮ್ಮ ಪ್ರದೇಶದಲ್ಲೂ ಕೂಡ ಟ್ಯಾಂಕ್‌ಬೆಡ್‌ಗಳಲ್ಲಿ ಟ್ಯೂಬ್‌ವೆಲ್ಸ್ ಹಾಕಿ ಮಳೆ ಬರದ ಕಾಲದಲ್ಲಿ, ನೀರು ನಿಲ್ಲದೇ ಹೋದ ಪ್ರಸಂಗ ಬಂದಲ್ಲಿ, ಆ ಬಾವಿಗಳ ಮೂಲಕವಾಗಿ ಕೆರೆ ಅಂಚಿನಲ್ಲಿರತಕ್ಕ ಜಮೀನಿಗೆ ನೀರನ್ನು ಹಾಯಿಸಿಕೊಳ್ಳುವಂತಹ ವ್ಯವಸ್ಥೆ ಮಾಡಬೇಕಾದ್ದು ಅತ್ಯ ವಶ್ಯಕ. ಆದ್ದರಿಂದ ಈ ಟ್ಯೂಬ್ ವೆಲ್ಸ್ ಸ್ಕೀಂಗೂ ಕೂಡ ಸರ್ಕಾರ ಗಮನಕೊಡಬೇಕೆಂದು ಹೇಳ ಬಯಸುತ್ತೇನೆ.

ಎರಡನೆಯದಾಗಿ ಇನ್ನೊಂದು ಮುಖ್ಯವಾದ ವಿಷಯ ಎಂದರೆ ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿ ವಿಚಾರವಾಗಿ ಮೈಸೂರು ಪ್ರದೇಶದವರು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಇದ್ದೆವು. ಬಹಳ ದಿವಸಗಳ ಹಿಂದಿನಿಂದ ಅಥವಾ ಪ್ರಥಮವಾಗಿ ಮೈಸೂರಿನಲ್ಲಿ ನಾವು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿದೆವು ಎಂದು. ಈ ಒಂದು ಕಾಂಪ್ಲಿಸೆನ್ಸಿ ಇಟ್ಟುಕೊಂಡು ಮುಂದಿನ ಯೋಜನೆಗಳಿಗೆ ಕೈಹಾಕದೇ ಅಲ್ಲಿಗೇ ಬಿಟ್ಟುಕೊಂಡು ಹೋಗಿ ಶರಾವತಿ, ಕಾಳೀನದಿ, ಮುಂತಾದ ವಿದ್ಯುಚ್ಛಕ್ತಿ ಪ್ರಾಜೆಕ್ಟುಗಳಿಗೆ ಅಷ್ಟಾಗಿ ಗಮನ ಕೊಡಲಿಲ್ಲ. ಒಂದು ಪ್ರಾಜೆಕ್ಟು ಮುಗಿಯುವ ಹೊತ್ತಿಗೆ ಮತ್ತೊಂದು ಪ್ರಾಜೆಕ್ಟನ್ನು ಕೈಕೊಳ್ಳುವ ಕಾರ್ಯಕ್ರಮ ಇಟ್ಟುಕೊಳ್ಳದೇ ಹೋದ ಕಾರಣದಿಂದಾಗಿ ಈ ದಿನ ನಮಗೆ ವಿದ್ಯು ಚ್ಛಕ್ತಿಯ ಅಭಾವ ಉಂಟಾಗಿದೆ. ದಯಮಾಡಿ ಒಂದು ಪ್ರಾಜೆಕ್ಟು ಮುಗಿಯುವವರೆಗೂ ಸುಮ್ಮನೆ ಕೂಡದೇ ಆ ಪ್ರಾಜೆಕ್ಟು ಪ್ರಾರಂಭದಲ್ಲಿ ಇರುವಾಗಲೇ ಇನ್ನೊಂದ ಪ್ರಾಜೆಕ್ಟನ್ನು ಸಿದ್ಧಗೊಳಿಸತಕ್ಕ ಕಾರ್ಯಕ್ರಮ ಇಟ್ಟುಕೊಂಡು ಕೆಲಸಕಾರ್ಯಗಳನ್ನು ಸಾಗಿಸಿಕೊಂಡು ಹೋಗಬೇಕೆಂದು ಹೇಳ ಬಯಸುತ್ತೇನೆ.

ಉದ್ಯಮಗಳ ವಿಚಾರ ಹಣಕಾಸಿನ ಮಂತ್ರಿಗಳಿಗೆ ಗೊತ್ತಿದೆ. ಮೂರನೇ ಪಂಚವಾರ್ಷಿಕ ಯೋಜನೆಯ ಮೊತ್ತ ಸುಮಾರು 350 ಕೋಟಿ ರೂಪಾಯಿ ಆಗಬಹುದಾಗಿತ್ತು. ಪ್ಲಾನಿಂಗ್ ಕಮಿಷನ್ ಅವರು ಖೋತಾ ಮಾಡಿದ್ದರಿಂದ ಕೊನೆಗೆ 250 ಕೋಟಿ ರೂಪಾಯಿಗಳಿಗೆ ಇಳಿಸಿದರು. ಆಗ ಅವರು 50 ಕೋಟಿ ರೂಪಾಯಿಗಳ ಉದ್ಯಮಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಭರ ವಸೆಯನ್ನು ಪಡೆದು ಬಂದಿದ್ದಾರೆ. ಆದರಲ್ಲಿ ಫರ್ಟಿಲೈಸರ್ ಪ್ಲಾಂಟು, ಅಲ್ಯೂಮಿನಿಯಂ ಪ್ಲಾಂಟು, ಸ್ಟೀಲ್ ಪ್ಲಾಂಟು, ಬಳ್ಳಾರಿ ಜಿಲ್ಲೆಯ ಹೊಸಪೇಟೆ ಭಾಗದಲ್ಲಿ ಅತ್ಯುತ್ತಮವಾದ ಅದರು ದೊರಕುವುದರಿಂದ ಅಲ್ಲಿ ಒಂದು ಸ್ಟೀಲ್ ಪ್ಲಾಂಟು, ಆಯಿಲ್ ರಿಫೈನರಿ, ಷಿಪ್ ಬಿಲ್ಡಿಂಗ್ ಯಾರ್ಡು ಸಂಪಾದಿಸಿಕೊಳ್ಳಬಹುದಾಗಿತ್ತು. ಆದರೆ ಇಲ್ಲಿಗೆ ಎರಡು ವರ್ಷಗಳು ಕಳೆದಹೋದಮೇಲಾದರೂ ಈಗ ಈ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಅಂಥ ಯಾವ ಉದ್ಯಮಗಳು ಸ್ಥಾಪನೆಯಾಗಿಲ್ಲ. ಆದರೆ ಜೊತೆಗೆ ನಮ್ಮ ರಾಜ್ಯ ಸರ್ಕಾರದವರಾದರೂ ಅವರ ಪರವಾಗಿ ಕೈಗೊಳ್ಳ ಬಹುದಾಗಿದ್ದ ಸಣ್ಣ ಪುಟ್ಟ ಉದ್ಯಮಗಳನ್ನೂ ಸಹ ಅವರು ಕೈಗೊಳ್ಳದೆ ಕುಳಿತಿದ್ದಾರೆ. ಆದರೆ ನಮ್ಮ ಅಕ್ಕ ಪಕ್ಕದ ರಾಜ್ಯಗಳಲ್ಲಿ ಈಗಾಗಲೇ ಅನೇಕ ಉದ್ಯಮಗಳನ್ನು ಅವರು ಕೈಗೊಂಡಿರತಕ್ಕ ಕಾಲದಲ್ಲಿ ನಾವು ಹೀಗೆ ತಾತ್ಸಾರ ಭಾವನೆಯಿಂದ ಕುಳಿತಿದ್ದರೆ ನಾವು ಯಾವಾಗ ನಮ್ಮ ರಾಜ್ಯದಲ್ಲಿ ಈ ಕೈಗಾರಿಕೋದ್ಯಮಗಳನ್ನು

ಬೆಳೆಸುವುದು ? ಇದರಿಂದ ನಮಗೆ ತುಂಬಾ ತೊಂದರೆಯಾಗುತ್ತದೆ. ಈ ವಿಚಾರವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಅಕ್ಕ ಪಕ್ಕದ ರಾಜ್ಯದಲ್ಲಿ ಯಾವತ್ತೋ ಒಂದು ದಿವಸ ಈ ಉದ್ಯಮಗಳು ಒಂದು ಸ್ಯಾಚುರೇಟೆಡ್ ಪಾಯಿಂಟನ್ನು ಮುಟ್ಟುತ್ತವೆ. ಹಾಗೆ ಅಲ್ಲಿ ಅವು ಆ ಸ್ಯಾಚುರೇಟೆಡ್ ಪಾಯಿಂಟನ್ನು ಮುಟ್ಟುವವರೆಗೆ ನಾವು ಇಲ್ಲಿ ಹೀಗೆ ಸುಮ್ಮನೆ ಕುಳಿತಿದ್ದು ಅನಂತರ ಇಲ್ಲಿ ನಾವು ನಮ್ಮ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳನ್ನು ಯಶಸ್ವಿಯಾಗಿ ಬೆಳೆಸಲು ಖಂಡಿತ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರದವರು ಈಗಾಗಲೇ ಈ ವಿಚಾರದಲ್ಲಿ ಬಹಳ ನಿಧಾನವಾಗಿರುವುದರಿಂದ ಇನ್ನು ಕಾಲಹರಣ ಮಾಡದೆ ಇಲ್ಲಿ ಈ ಕೈಗಾರಿಕೋದ್ಯಮಗಳನ್ನು ಹೆಚ್ಚು ಹೆಚ್ಚಾಗಿ ಪ್ರಾರಂಭ ಮಾಡುವುದಕ್ಕೆ ತೀವ್ರ ಪ್ರಯತ್ನಮಾಡಬೇಕೆಂದು ನನ್ನ ಆಸೆ ಮತ್ತು ಸರ್ಕಾರದಲ್ಲಿ ವಿನಂತಿ ಸಹ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಆರ್ಥಿಕ ಮಂತ್ರಿಗಳು ಈ ಕೆಲವು ಉದ್ಯಮಗಳು ಕಳೆದ 4-5 ವರ್ಷಗಳ ಕಾಲದಲ್ಲಿ ಪ್ರಾರಂಭದಲ್ಲಿ ಹೆಚ್ಚಿನ ಲಾಭವನ್ನು ಕೊಟ್ಟು ಮಧ್ಯ ಕಾಲದಲ್ಲಿ ಆ ಲಾಭ ಪೂರ್ಣ ಕಡಮೆಯಾಯಿತು ಎಂಬ ಒಂದು ಅಂಶ ಅವರು ಕೊಟ್ಟ ಅಂಕಿ ಅಂಶಗಳಿಂದ ವೇದ್ಯವಾಗುತ್ತದೆ. ಅಂತೂ ಈ ನಮಗೆ ಈಗ ಉದ್ಯಮಗಳಿಂದ ಎಷ್ಟು ಲಾಭ ದೊರಕಬೇಕೋ ಅಷ್ಟು ಲಾಭ ದೊರಕುತ್ತಿಲ್ಲ ಎಂಬುದು ಅವರ ಅಂಕೀ ಅಂಶಗಳಿಂದ ಕಂಡು ಬರುತ್ತಿದೆ. ಆದರೆ ಈ ಉದ್ಯಮಗಳು ನಮಗೇಕೆಲಾಭ ತಂದು‌ಕೊಡುತ್ತಿಲ್ಲ ಎಂಬ ಕಡೆಗೆ ಸರ್ಕಾರದವರು ಲಕ್ಷ ಕೊಡ ಬೇಕು ಎಂತ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಾನು ಅಗ್ರಿಕಲ್‌ಚರ್ ವಿಚಾರವಾಗಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಆದರೆ ಸರ್ಕಾರದವರು ನಾವು ಇಷ್ಟು ಪರ್ಸೆಂಟ್ ಹೆಚ್ಚುಮಾಡಿದ್ದೇವೆ, ಅಷ್ಟು ಪರ್ಸೆಂಟ್ ಹೆಚ್ಚು ಮಾಡಿದ್ದೇವೆ ಅಂತ ಹೇಳುತ್ತಿದ್ದಾರೆ. ಅವರು ಈ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟೊಂದು ಕಾರ್ಯ ಕ್ರಮಗಳನ್ನು ಇಟ್ಟು ಕೊಂಡಿದ್ದೇವೆ ಎಂತ ಹೇಳುತ್ತಾರೆ. ಆದರೆ ಈಗ ಅಲ್ಲಲ್ಲಿ ಕೆಲವು ಸೀಡ್ ಮಲ್ಟಿಪ್ಲಿಕೇಷನ್ ಫಾರಂಗಳಿದ್ದರೂ ಈ ಅನುಕೂಲ ಎಲ್ಲಾ ತಾಲ್ಲೂಕುಗಳಿಗೂ ಇನ್ನೂ ಮುಟ್ಟಿಲ್ಲ ಎಂತ ನಾನು ಹೇಳಬಯಸುತ್ತೇನೆ. ಆದ್ದರಿಂದ ಈ ಸೀಡ್ ಮಲ್ಟಿಪ್ಲಿಕೇಷನ್ ಫಾರಂ ಗಳನ್ನೂ ಎಲ್ಲ ತಾಲ್ಲೂಕುಗಳಲ್ಲೂ ಸ್ಥಾಪಿಸಿ ಅವುಗಳ ಮೂಲಕ ಒಳ್ಳೆಯ ಬೀಜಗಳನ್ನು ರೈತರಿಗೆ ಹಂಚುವ ಒಂದು ವ್ಯವಸ್ಥೆಯನ್ನು ಸರ್ಕಾರದವರು ಕೂಡಲೆ ಕೈಗೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಫರ್ಟಿಲೈಜರ್ಸ್ ಮತ್ತು ಉತ್ತಮ ಗೊಬ್ಬರಗಳ ಸರಬರಾಯಿಯ ವಿಚಾರ. ಇದರ ಕಡೆಗೆ ಸರ್ಕಾರ ಸಾಕಷ್ಟು ಗಮನ ಕೊಟ್ಟಿಲ್ಲ ಅಂತ ಹೇಳ ಬಯಸುತ್ತೇನೆ. ಸರ್ಕಾರದವರು ರೈತರಿಗೆ ಉತ್ತಮ ಬೀಜ ಉತ್ತಮ ಗೊಬ್ಬರಗಳ ಸರಬರಾಯಿ ಮಾಡಿದಾಗ್ಯೂ ಸಕಾಲಕ್ಕೆ ಮಳೆಬಾರದೆ ರೈತರಿಗೆ ಹೆಚ್ಚು ಉತ್ಪನ್ನ ಆಗುತ್ತಿಲ್ಲವೆಂತ ಹೇಳಬಹುದು, ಆದರೆ ಅದು ಮುಖ್ಯವಾದ ಕಾರಣವಲ್ಲ. ಮಳೆ ಬಂದರೂ ಸಹ ಹೆಚ್ಚು ಬೆಳೆ ಆಗುವುದಿಲ್ಲ—ಕಾರಣ ವೇನೆಂದರೆ ಬೆಳೆಗಳಿಗೆ ಆಗಾಗ್ಗೆ ಈ ಪೆಸ್ಟ್ಸ್ ಅಂಡ್ ಡಿಸೀಜಿಸ್‌ಗಳು ಬರುತ್ತಿರುವುದೇ ಆಗಿದೆ. ಈ ರೋಗ ನಿವಾರಣೆಯ ಕಡೆಗೆ ಸರ್ಕಾರ ಸಾಕಷ್ಟು ಗಮನ ಕೊಟ್ಟಿಲ್ಲ ಅಂತ ಹೇಳುತ್ತೇನೆ, ಅನೇಕ ವೇಳೆ ಈ ರೋಗಗಳಿಗೆ ಬೆಳೆಗಳು ತುತ್ತಾಗಿ ರೈತನಿಗೆ ಹೆಚ್ಚು ಬೆಳೆ ಬಾರದಿರುವುದು ಹೋಗಲಿ, ಆತನಿಗೆ ಹೊಟ್ಟೆಗೆ ಸಾಕಾಗುವಷ್ಟು ಕೂಡ ಸಿಗುತ್ತಿಲ್ಲ ಎಂಬ ವಿಚಾರ ತಮಗೆಲ್ಲರಿಗೂ ತಿಳಿದಿರತಕ್ಕದ್ದೆ ಆಗಿದೆ. ಆದ್ದರಿಂದ ಈ ರೋಗ ನಿವಾರಣೆಗಳ ಕಡೆಗೆ ಸಾಕಷ್ಟು ಗಮನ ಕೊಟ್ಟಿಲ್ಲ ಎಂಬ ಅಂಶವನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಈ ರೋಗಗಳ ವಿಚಾರದಲ್ಲಿ ಈಗ ಇಲಾಖೆಗೆ ರೈತ ರೇನಾದರೂ ದೂರುಗಳನ್ನು ಕೊಟ್ಟರೇನೇ ಅವರು ಅಲ್ಲಿಗೆ ಬರುತಾರೆ. ಅವರು ಬರುವುದಾದರೂ ಯಾವಾಗ ? ರೋಗ ಎಲ್ಲ ಹೋಗಿ ಬೆಳೆ ಸಂಪೂರ್ಣ ಹಾಳಾದ ಮೇಲೆ ಅವರು ಸ್ಥಳಕ್ಕೆ ಬರುತ್ತಾರೆ. ಈ ವರ್ಷ ಒಂದು ಸೀಜನ್ನಲ್ಲಿ ಬೆಳೆಗಳಿಗೆ ರೋಗ ಬಂದರೆ ಆ ರೋಗ ಮುಂದಿನ ಸಾಲಿನಲ್ಲಿ ಆ ಬೆಳೆಗೆ ಬಾರದಂತೆ ಅದನ್ನು ತಡೆಗಟ್ಟಲು ಮತ್ತು ಆ ಬಗ್ಗೆ ಏನೇನು ಕ್ರಮಗಳನ್ನು ಇಲಾಖೆಯವರು ಕೈ ಗೊಳ್ಳಬೇಕೆಂಬ ವಿಚಾರಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ. ಹೀಗಾಗಿ ನಮ್ಮ ರೈತರ ಆರ್ಥಿಕ ಪರಿಸ್ಥಿತಿ ನಾವು ಎಷ್ಟು ಆಶಿಸಿದ್ದೆವೋ ಅಷ್ಟು ಮಟ್ಟದಲ್ಲಿ ಆಗಿಲ್ಲ ಇದಕ್ಕೆ ಕಾರಣ ವೇನೆಂಬುದರ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ನಮ್ರತೆಯಿಂದ ನಾನು ಅವರನ್ನು ವಿನಂತಿಮಾಡಿ ಕೊಳ್ಳುತ್ತೇನೆ. ಈ ದಿವಸ ನಮ್ಮಲ್ಲಿ ಏನಿದ್ದರೂ ಜನರು ಬರಿ ಈ ಅಕ್ಕಿ—ರಾಗಿ, ಗೋಧಿ—ಜೋಳ ಗಳನ್ನೇ ಅವಲಂಬಿಸಿಕೊಂಡಿದ್ದಾರೆ. ಆದರೆ ಹೀಗೆ ನಮ್ಮಲ್ಲಿ ಕಾಳು ಕಡ್ಡಿಗಳು ಕಡಮೆಯಾಗಿರುವಾಗ ನಮ್ಮ ಸರ್ಕಾರ ಈ ಕೊರತೆಯನ್ನು ಸರಿದೂಗಿಸಲು ಹಣ್ಣು ಹಂಪಲುಗಳನ್ನು ಅಭಿವೃದ್ಧಿ ಗೊಳಿಸುವ ಹಾಗೂ ಕಾಯಿ ಪಲ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಲು ಉತ್ತೇಜನ ಕೊಡತಕ್ಕ ಬಾಬಾದ ಹಾರ್ಟಿಕಲ್‌ಚರಲ್ ಇಲಾಖೆಗೂ ಸಾಕಷ್ಟು ಗಮನ ಕೊಡಬೇಕು. ಆದರೆ ಈಗ ಆ ಗಮನ ಅಷ್ಟು ಕಡೆ

ಶ್ರೀ ಸಿರ್ಸಪ್ಪ ಇಜಾರಿ)

ಹೋಗುತ್ತಿಲ್ಲ. ಆದ್ದರಿಂದ ಈ ವಿಚಾರಕ್ಕೆ ಅಗ್ರಿಕಲ್‌ಚರಲ್ ಇಲಾಖೆಯವರು ಮತ್ತು ಸರ್ಕಾರದವರು ಹೆಚ್ಚಿನನಿಗಾ ಕೊಡಬೇಕೆಂದು ನಾನು ಅವರಲ್ಲಿ ಕೇಳಿ ಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ ನಮ್ಮಲ್ಲಿ ಕಡ್ಡಾಯ ಶಿಕ್ಷಣವನ್ನೇನೋ ಜಾರಿಗೆ ತರಲಾಗಿದೆ. ಆದರೆ ಶಾಲೆಗಳಲ್ಲಿ ಸಾಕಷ್ಟು ಉಪಾಧ್ಯಾಯರುಗಳು ಇಲ್ಲ. ಈ ಶಾಲೆಗಳನ್ನು ನಡೆಸುವುದಕ್ಕೆ ಕಟ್ಟಡಗಳೂ ಸಹ ಇರುವುದಿಲ್ಲ, ಈ ಯೋಜನೆ ಹೀಗಾಗಿ ಬರಿ ಕಾಗದದ ಮೇಲೇ ಉಳಿದಿದೆ. ಇದು ಸರಿಯಲ್ಲ. ಇದನ್ನು ಕಾರ್ಯ ರೂಪಕ್ಕೆ ತರಬೇಕು. ಈ ವಿಚಾರದಲ್ಲಿ ಸರ್ಕಾರ ದವರು ಕೂಡಲೆ ನಿಗಾ ಕೊಟು ಶಾಲೆಗಳಿಗೆ ಸಾಕಷ್ಟು ಉಪಾಧ್ಯಾಯರನ್ನು ಮತ್ತು ಶಾಲಾ ಕಟ್ಟಡಗಳನ್ನು ಒದಗಿಸಿ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವಂತಾಗಬೇಕೆಂಬುದೇ ನನ್ನ ಉತ್ಕಟಇಚ್ಛೆ.

ಇನ್ನು ನಮ್ಮ ಮೈಸೂರು ರಾಜ್ಯದಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಟ್ರೈನಿಂಗಿಗಾಗಿ ಯಾವತ್ತೂ ಪ್ರೋತ್ಸಾಹವಿಲ್ಲ. ಈ ದಿವಸ ನಮ್ಮ ಜನರು ಈ ಪೋಸ್ಟ್‌ಗ್ರ್ಯಾಜುಯೇಟ್ ಟ್ರೈನಿಂಗಿಗಾಗಿ ಮದ್ರಾಸಿಗೋ, ಕಲ್ಕತ್ತಾಕ್ಕೋ ಇಲ್ಲವೇ ಬೊಂಬಾಯಿಗೋ — ಲಕ್ನೋಕ್ಕೋ ಹೋಗಬೇಕಾಗಿದೆ. ಸಾಲದ್ದಕ್ಕೆ ಪರ ದೇಶಗಳಿಗೂ ಹೋಗುತ್ತಿದ್ದಾರೆ. ಈ ವಿಚಾರ ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ನಮಗೆ ಹೆಚ್ಚಿನ ಸೌಲಭ್ಯಗಳಿಲ್ಲದಿದ್ದರೆ ಹೋಗಲಿ, ಎಷ್ಟಿರಬೇಕೋ ಅಷ್ಟೂ ಸಹ ಇಲ್ಲ. ಈ ಅನುಕೂಲ ವನ್ನು ಇನ್ನು ಮುಂದಕ್ಕಾದರೂ ಇಲ್ಲಿ ಮಾಡಿ ಕೊಡಬೇಕೆಂದು ನಾನು ನಮ್ಮ ಸರ್ಕಾರದವರಲ್ಲಿ ಬಿನ್ನಹ ಮಾಡಿಕೆಳ್ಳುತ್ತೇನೆ.

ಹೀಗೇ ನಮ್ಮಲ್ಲಿ ಈ ಟೆಕ್ನಿಕಲ್ ಟ್ರೈನಿಂಗುಗಳೇನಿವೆ ಅವುಗಳು ಸಹ ಸಾಕಷ್ಟಿಲ್ಲ. ನಮ್ಮ ಬಳ್ಳಾರಿಜಿಲ್ಲೆಯೊಂದರಲ್ಲೇ 15 20 ಜಾತಿ ಮಿನರಲ್‌ಗಳು ಸಿಗುತ್ತವೆ ಅವುಗಳಿಂದ ಒಂದು ಹೆಚ್ಚಿನ ಉತ್ಪತ್ತಿ ಸರ್ಕಾರಕ್ಕೆ ಬರುತ್ತದೆ. ಇಂಥ ವಿಚಾರದಲ್ಲಿ ಜನಗಳಿಗೆ ಒಂದು ಹೆಚ್ಚಿನ ವಿದ್ಯೆ—ಜ್ಞಾನ ಉಂಟಾಗುವುದಕ್ಕೆ ಸರ್ಕಾರದವರು ಅವಕಾಶ ಕಲ್ಪಿಸಬೇಕು. ಈ ಕಾರಣಕ್ಕಾಗಿ ನಮ್ಮಲ್ಲಿಯ ಮಕ್ಕಳಿಗೆ ಈ ಮೈನಿಂಗ್ ಅಂಡ್ ಮೆಟಲರ್ಜಿ ವಿಚಾರದಲ್ಲಿ ಹೆಚ್ಚಿನ ಪರಿಶ್ರಮ ಮತ್ತು ಜ್ಞಾನಾರ್ಜನೆ ದೊರೆಯುವಂತಾಗಬೇಕಾದರೆ ನಮ್ಮಲ್ಲಿ ಈ ಟೆಕ್ನಿಕಲ್ ಬಾಬಿಗೆ ಅನುಕೂಲವಾದ ಕಾಲೇಜುಗಳನ್ನು— ಟೆಕ್ನಿಕಲ್ ಶಾಲೆಗಳನ್ನು ಸರ್ಕಾರದವರು ತಡೆಯಬೇಕು. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಒಂದು ಈ ಮಿನರಲ್ಸ್‌ಗೆ ಸಂಬಂಧ ಪಟ್ಟ ಹಾಗೆ ಕಾಲೇಜನ್ನು ತೆರೆಯಲು ಬೇಕಾದಷ್ಟು ಸ್ಕೋಪಿದೆ. ಸರ್ಕಾರ ದವರು ಇದನ್ನೂ ಮಾಡತಕ್ಕದ್ದು ಅವಶ್ಯಕ.

ಇನ್ನು P.W.D. ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಆ ಮಂತ್ರಿಗಳು ಅವರಲ್ಲಿ ರೊಕ್ಕವಿಲ್ಲ—ಆದುದರಿಂದ ಹೆಚ್ಚು ಕೆಲಸ ಮಾಡುವುದಕ್ಕಾಗುವುದಿಲ್ಲ ಅಂತ ಹೇಳುತ್ತಿದ್ದಾರೆ. ಅವರಿಗೆ ದೊರೆತಿದ್ದ 8—9 ಕೋಟಿ ರೂ. ಗಳನ್ನು ಅವರು ಖರ್ಚುಮಾಡಿ ಈಗ ಸುಮ್ಮನೆ ಕೈಕಟ್ಟಿಕುಳಿತಿರುವುದಾಗಿ ಹೇಳುತ್ತಿದ್ದಾರೆ. ಇದರಿಂದ ಜನತೆ ಬಹಳ ಅಸಮಾಧಾನ ಗೊಂಡಿದೆ. ಒಂದೊಂದು ತಾಲ್ಲೂಕಿನಲ್ಲಿ 250—300 ಮೈಲಿ ರಸ್ತೆ ಸಹ ಆಗಿದೆ. ಇತರ ತಾಲ್ಲೂಕು ಗಳಲ್ಲಿ ಈಗ ಅವರು ಏನು ಒಂದು ಆ 50 ಮೈಲಿಗಳ ಟಾರ್ಗೆಟ್ಟನ್ನು ಮಾಡಿಕೊಂಡಿದ್ದಾರೋ ಅದೂ ಸಹ ಪೂರ್ತಿ ಆಗಿಲ್ಲ. ಈಗಲಾದರೂ ಸರ್ಕಾರ ಈ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಂಡು ರಾಜ್ಯದಲ್ಲಿ ಈ ರಸ್ತೆಗಳ ಅಭಿವೃದ್ಧಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ನಾನು P.W.D. ಮಂತ್ರಿ ಗಳಲ್ಲಿ ಬೇಡಿಕೊಳ್ಳುತ್ತೇನೆ.

SRI VIDHYADHAR GURUJI SAYANNA (Gurumitkal):—

[Spoke in Hindustani]

9 A.M.

Sri RAMAKRISHNA HEGDE (Minister for Co-operation).—On a point of order, Sir. The Hon'ble Member by insinuation has cast aspersion on the Chair saying that when Mr. Gopala Gowda wanted the Governor's speech to be read in Kannada, the Chair by a gesture of hand made him sit down, and that it is an insult to the whole of the House Is it correct?

Mr. SPEAKER.—It did happen like that. I did show my hand asking him to sit down and the Member did sit down and the reflection

that is now said to have been cast does not amount to a breach of privilege. It is an individual opinion of a Member which is erroneous. The Member may continue his speech.

[SRI VIDYADHAR GURUJI SAYANNA *continued his Spcech in Hindustani*]

ಶ್ರೀ ಟಿ. ಕೆ. ಕಂಬಳಿ (ಕುಂದಗೋಳ).—ಮಾನ್ಯ ಅಧ್ಯಕ್ಷರೇ, 1963-64ನೇ ಸಾಲಿನ ಆಯವ್ಯಯ ಪಟ್ಟಿಗೆ ಸಂಪೂರ್ಣವಾಗಿ, ಹೃತ್ಪೂರ್ವಕವಾಗಿ ಸ್ವಾಗತ ಬಯಸಿ ಬೆಂಬಲ ಕೊಡುತ್ತೇನೆ. ಈ ಸಾರಿಯ ಬಡ್ಜೆಟ್ಟನ್ನು ಕೆಲವು ಜನ ಇದು ದೋಷರಹಿತವಾಗಿದ್ದರೂ ಟೀಕೆಗೋಸ್ಕರ ಟೀಕೆ ಮಾಡಿದ್ದರು. ನಾನು ಹೇಳುವುದಿಷ್ಟೇ, ಟೀಕೆ ಮಾಡಬೇಕು. ಟೀಕೆ ಯಾವ ಪ್ರಕಾರ ಇರಬೇಕೆಂದರೆ, ಕೆಲಸವಾಗಬೇಕು, ಕಾರ್ಯವಾಗಬೇಕು, ಆ ಪ್ರಕಾರ ಟೀಕೆ ಮಾಡಬೇಕು. ಟೀಕಾವನ್ನು ಒಂದು ಉದ್ವೇಗದ ಮೇಲೆ ಟೀಕೆ ಮಾಡಬಾರದು. ಈ ಸಾರಿಯ ಬಡ್ಜೆಟ್ಟನ್ನು ನಮ್ಮ ರಾಜ್ಯದ ದೊಡ್ಡ ದೊಡ್ಡ ಪತ್ರಿಕಾ ಕರ್ತರು, ಮತ್ತೆ ದೊಡ್ಡ ದೊಡ್ಡವರೆಲ್ಲ ಬಹಳ ಸ್ವಾಗತ ಮಾಡಿದ್ದಾರೆ. ಇಂತಹ ಬಡ್ಜೆಟ್ಟು ನಮ್ಮ ರಾಜ್ಯಕ್ಕೆ ಬಂದದ್ದು ಒಂದು ಸುದೈವವೆಂದು ಕಲವು ಪತ್ರಿಕಾ ಕರ್ತರು ಹೇಳಿದ್ದಾರೆ. ಆದರೆ ನಮ್ಮ ಕೆಲವರು ಮಹನೀಯರು ಇಲ್ಲ ಟೀಕೆ ಮಾಡಿದ್ದಾರೆ. ಇದು ಹೇಗಿದೆ ಎಂದರೆ ಕಾಮಾಲೆ ರೋಗ ಬಂದವರ ಕಣ್ಣಿಗೆ ಎಲ್ಲವೂ ಅರಶಿನದ ಬಣ್ಣ ಕಂಡಂತೆ ಹಳದಿಯಾಗಿ ಕಾಣುತ್ತದೆ. ಹಾಗೆ ಇದು ನಮ್ಮ ಕಣ್ಣಿಗೆ ಯಾವ ಬಣ್ಣದ ಕನ್ನಡಕ ಹಾಕಿಕೊಂಡರೆ, ಆ ಬಣ್ಣದ ಕನ್ನಡಕದಂತೆ ಕಾಣುತ್ತದೆ. ಇದು ಒಂದು ದೋಷರಹಿತವಾದ ಬಡ್ಜೆಟ್ಟು. ಇದರೊಳಗೆ ತಪ್ಪನ್ನು ಕಂಡುಹಿಡಿಯಬೇಕಾಗಿದ್ದರೆ ಅದು ಕನ್ನಡಕದ ದೋಷವೇ ಹೊರತು, ಬಡ್ಜೆಟ್ಟನದಲ್ಲ. ಕನ್ನಡಕದ ಆಧಾರದ ಮೇಲೆ ತಿಳಿದುಕೊಳ್ಳುವುದರಲ್ಲದೆ. ಈ ಸಭೆಗೆ ಆಯವ್ಯಯ ಪಟ್ಟಿಯು ಕಲ್ಪವೃಕ್ಷ ಇದ್ದ ಹಾಗೆ. ಯಾರಿಗೆ ಏನು ಬೇಕೋ ಅದು ಸಿಕ್ಕುತ್ತದೆಂದು ಸ್ಪಷ್ಟವಾಗಿ ಹೇಳಬಹುದು. ಇನ್ನು ಕೆಲವು ವಿಷಯಗಳ ಕಡೆ ಸರಕಾರದ ಗಮನ ಸೆಳೆಯ ಬಯಸುತ್ತೇನ. ಅರ್ಥ ಸಚಿವರ ಭಾಷಣದ ನಾಲ್ಕನೇ ಪ್ಯಾರಾಗ್ರಾಫದಲ್ಲಿ ಒಂಭತ್ತು ಬೆಳೆಗಳ ಉತ್ಪತ್ತಿ ವಿಸ್ತೀರ್ಣ ಇವುಗಳ ವಿವರ ಕೊಟ್ಟಿದ್ದಾರೆ. ಇದರಲ್ಲಿ ಗೋದಿ ಬೆಳೆ ಬಂದಿಲ್ಲ. ನಮ್ಮ ಉತ್ತರ ಕರ್ನಾಟಕ ಪ್ರದೇಶದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಗೋದಿ ಬೆಳೆಯುತ್ತಾರೆ. ಇದು ನಮೂದು ಆಗಿಲ್ಲ, ಹಳೇ ಮೈಸೂರು ಪ್ರದೇಶದಲ್ಲಿ ಗೋದಿ ಬೆಳೆಯುವ ಕ್ಷೇತ್ರ ಮುಂಚೆ ಇದ್ದಿದ್ದಿಲ್ಲ. 1956ರ ನಂತರ ಹೊಸ ರಾಜ್ಯರಚನೆಯಾದ ಮೇಲೆ ಗೋದಿ ಬೆಳೆಯುವ ಕ್ಷೇತ್ರ ಕೂಡಿದೆ. ಬೊಂಬಾಯಿ ಕರ್ಣಾಟಕ, ಹೈದರಾಬಾದ ಕರ್ಣಾಟಕ ಪ್ರದೇಶದಲ್ಲಿ ಗೋದಿ ಹೆಚ್ಚಾಗಿ ಬೆಳೆಯುತ್ತದೆ. ಈ ಗೋದಿ ಬೆಳೆಯನ್ನು ಇದರಲ್ಲಿ ನಮೂದು ಮಾಡಬೇಕಾಗಿತ್ತು ಎಂದು ಹೇಳಬಯಸುತ್ತೇನ. ಈಗ ನಮೂದು ಮಾಡದೇ ಇದ್ದರೂ ಕೂಡ ಅಂಥಾದ್ದೇನೂ ಹೆಚ್ಚುಕಡಿಮೆ ಆಗಿಲ್ಲ. ಇನ್ನು ಮುಂದೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಹತ್ತಿ ಬೆಳೆ ಹೆಚ್ಚಾಗಿದೆ ಎಂದೂ ತೋರಿಸಿದ್ದೀರಿ. ಐದಾರು ವರ್ಷಗಳ ಕೆಳಗೆ ಹತ್ತಿಗೆ ಏನು ಬೆಲೆ ಬರುತ್ತಿತ್ತೋ ಅದು ಈಗ ಬರುವದಿಲ್ಲ ಎಂದು ಕೆಲವರು ಸ್ನೇಹಿತರು ಸ್ಪಷ್ಟವಾಗಿ ಏನು ಹೇಳಿದ್ದಾರೋ ಅದು ನಿಜ. ಬೀಜ ಬದಲಾಗುತ್ತಿದೆ. ಆದರೆ ಕಳೆದ ವರ್ಷ ಬದಲುಮಾಡಿಲ್ಲ, ಬೀಜಕ್ಕೆ ಹುಳ ಸೇರಿದೆ. ಒಂದು ಕೂರಿಗೆ ಭೂಮಿಯಲ್ಲಿ 80 ಮಣ ಹತ್ತಿ ಹಿಂದಕ್ಕೆ ಬರುತ್ತಿದ್ದರೆ ಈಗ 6-8 ಮಣ ಬರುತ್ತದೆ. ಈ ಮಾತನ್ನು ಅನೇಕ ಸಲ ಹೇಳಿದ್ದೇನ. ಇದೊಂದು ವಿಷಾದಕರ ಸಂಗತಿ. ಇದರಿಂದ ವ್ಯವಸಾಯ ಇಲಾಖೆಯ ಮೇಲಿನ ಜನರ ವಿಶ್ವಾಸ ಹಾರಿಹೋಗುತ್ತದೆ. ಒಳ್ಳೆ ಪೀಕ ಬರುವುದು ಹೋಗುತ್ತಾ ಇದೆ. ಈಗ ಇರುವ ಬೀಜ ಏನೂ ಉಪಯೋಗವಿಲ್ಲ. ಅದು ನಿರುಪಯೋಗಿ ಎಂದು ಹೇಳಬಹುದು. ಆದ್ದರಿಂದ ಈ ವರ್ಷ ಒಳ್ಳೇ ಬೀಜ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ವ್ಯವಸ್ಥೆಯ ವಿಚಾರ. ಧಾರ್‍ವಾಡ ಜಿಲ್ಲೆಯಲ್ಲಿ ಬೆಣ್ಣೆಹಳ್ಳದ ದಂಡೆಗುಂಟ 40-50 ಊರುಗಳಿವೆ. ಅಲ್ಲಿ ಸಿಹಿ ನೀರು ದೊರಕುವುದಿಲ್ಲ. ಅಲ್ಲಿ ಸಿಹಿ ನೀರಿನ ಬಾವಿ ಮಾಡುವುದು ಸಾಧ್ಯವಿಲ್ಲ. ಕುಡಿಯುವ ನೀರಿನ ಸಲುವಾಗಿ ಊರಿಗೆ ಒಂದೊಂದು ಕೆರೆಯನ್ನು ಆದಷ್ಟು ತೀವ್ರ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು P.W.D.ಯ ವಿಚಾರ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಪರಿಸ್ಥಿತಿ ಸಮಾಧಾನಕರವಾಗಿಲ್ಲ. ಮೊದಲು ಅದು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು. ಆ ಮೇಲೆ ಕೇಂದ್ರ ಸರ್ಕಾರದ ಅಧೀನಕ್ಕೆ ಬಂದ ನಂತರ ಬೊಂಬಾಯಿ ರಾಜ್ಯದಲ್ಲಿ ಸೇರ್ಪಡೆಯಾಯಿತು. ಈಗ ಮೈಸೂರು ರಾಜ್ಯದಲ್ಲಿ ಬಂದಿದ್ದು. ಕೊನೆಯವರೆಗೆ ಇಲ್ಲಿಯೇ ಉಳಿಯುತ್ತದೆ. 50 ವರ್ಷದ ಬಯಕೆ ಈಗ ಈಡೇರಿದೆ. ಧಾರವಾಡ ಜಿಲ್ಲೆಯಲ್ಲಿ ಕುಂದಗೋಳ ತಾಲ್ಲೂಕು ಎಲ್ಲಕ್ಕೂ ಹೆಚ್ಚು ಟ್ಯಾಕ್ಸ್ ಕೊಡುತ್ತಿದೆ. ಆದರೆ ಈ ತಾಲ್ಲೂಕಿನಲ್ಲಿ ಯಾವ ಸೌಕರ್ಯವಿಲ್ಲ. ಈಗ ಅಲ್ಪಸ್ವಲ್ಪ ಪ್ರಮಾಣದಲ್ಲಿ

(ಶ್ರೀ ಟಿ. ಕೆ. ಕಂಬಳಿ)

ಸುಧಾರಣೆಯಾಗುವುದಕ್ಕೆ ಪ್ರಾರಂಭವಾಗಿದೆ. ಇನ್ನೂ ಆಗಬೇಕಾದ ಕೆಲಸ ಬಹಳವಿದೆ. ರಸ್ತೆ ಇಲ್ಲ. ಈಗ ಇತ್ತೀಚೆಗೆ 19 ಮೈಲು ರಸ್ತೆ ರಚನೆಯಾಗಿದೆ. ಆದರೆ ಅದು ಮಳೆಗಾಲದಲ್ಲಿ ಉಪಯೋಗವಾಗುವುದಿಲ್ಲ. ಬೆಣ್ಣೆನಾಲಾಕ್ಕೆ ಒಂದು ಸೇತುವೆ ಮಾಡಬೇಕಾದುದು ಬಹಳ ಅವಶ್ಯಕವಾಗಿದೆ. ಈ ಒಂದು ಸೇತುವೆ ಕಟ್ಟುವವರಿಂದ 19 ಮೈಲಿ ರಸ್ತೆ ಉಪಯೋಗವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ 50 ಮೈಲಿ ರಸ್ತೆ ಮಾಡುತ್ತೇವೆಂದು ಹೇಳಿದ್ದಾರೆ. ಸಂಬಂಧಪಟ್ಟ P.W.D. ಮಂತ್ರಿಗಳು ಈ ಕೆಲಸವನ್ನು ಬೇಗನೆ ತೆಗೆದುಕೊಂಡು ಮಾಡಬೇಕೆಂದು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಒಂದಾದರೂ ಪ್ರವಾಸಿ ಮಂದಿರ (Traveller's, Bungalow) ಇಲ್ಲ. ಸರಕಾರಿ ಬಿಲ್ಡಿಂಗ್ ಬಹಳ ನಾದುರಸ್ತಿಯಾಗಿದೆ. ಒಂದು T B. ಆದಷ್ಟು ಜಾಗ್ರತೆ ಮಾಡಬೇಕು. ರಸ್ತೆ ಸರಿಯಾಗಿಲ್ಲವಾದ್ದರಿಂದ S.T. ಬಸ್ಸು ಓಡಾಡುವುದಿಲ್ಲ. ತಾಲ್ಲೂಕ ಹೆಡ್ ಕ್ವಾರ್ಟರ್ಸನಲ್ಲಿ S.T. Stand ಆಗ ಬೇಕಾಗಿದೆ. ದೊಡ್ಡ ದೊಡ್ಡ ಕೆಲಸಗಳ ಜೊತೆಗೆ ಸಣ್ಣ ಕೆಲಸಗಳನ್ನೂ ಸಹ ತೆಗೆದುಕೊಂಡು ಮುಗಿಸಬೇಕೆಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ವಿದ್ಯುತ್ ಶಕ್ತಿ ಪೂರೈಕೆಯಿಲ್ಲ. ದೊಡ್ಡ ದೊಡ್ಡ ನಗರಗಳಿಗೆ ಕೊಡುವದರ ಜೊತೆಗೆ ಸಣ್ಣ ಊರಿಗೂ ಇಲೆಕ್ಟ್ರಿಸಿಟಿ ಪೂರೈಸಬೇಕು. ಇಪ್ಪತ್ತು ಸಾವಿರ ಜನ ಸಂಖ್ಯೆ ಇರುವ ಊರಿಗೆ ವಿದ್ಯುತ್ ಶಕ್ತಿ ಕೊಡಬೇಕೆಂದು ಸೂಚಿಸುತ್ತೇನೆ.

ಕೊನೆಯದಾಗಿ, ಈ ವರ್ಷದ ಬಜೆಟ್ಟಿಗೆ ನಾನು ಸಂಪೂರ್ಣ ಬೆಂಬಲ ಕೊಡುತ್ತೇನೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—I would like to know which of the Honourable Ministers are likely to participate in the reply and how much time they require?

Sri S. R. KANTHI (Minister for Education).—In this respect, the Finance Minister will reply, but I would like to have only two minute to explain one or two matters.

Mr. SPEAKER.–How much time does the Finance Minister require?

Sri B. D. JATTI (Minister for Finance).—I require 1½ hours and the Minister for Forest requires about twenty minutes.

Mr. SPEAKER.—I will call upon the Treasury Bench at 10 o'clock.

Sri S. R. KANTHI.—There are a few points I want to clarify.

9-30 A.M.

Mr. SPEAKER.—Soon after Sri Madappa Gowda's speech I will call upon the Minister for Education and then the general debate would go on and at 11 A.M. the Hon'ble Minister for Finance would reply.

Sri S. SIVAPPA (Sravanabelgola).—Yesterday itself we agreed that the House should be allowed the whole of the morning for discussion......

Mr. SPEAKER.—The House did not agree.

†Sri S. SIVAPPA.—It was not accepted by the Leader because he had some other engagement; this is a sorry state of affairs particularly when the Assembly is in session. Therefore we gave our acceptance to sit in the morning. I suggest that the general discussion may go on till 11 and the treasury benches may commence replies afterwards and we may go on till 1-30. P.M. One more suggestion I would offer is that this extra hour should be given only to this side because the Ministers would in any case reply and there is no need for Congress members to participate further.

† Indicates that the remarks or speeches have not been revised by the member concerned.

Mr. SPEAKER.—This is how I propose to deal with it. The Hon'ble Minister for Finance will begin his reply at 11 A.M. and go on till 1-30 P.M. Is that all right ?

Sri B. D. JATTI.—Yes, Sir.

Mr. SPEAKER.—There will be no tea-break. On the second point raised by Sri Sivappa, I cannot concede the request that the whole hour should be given to one side. This being Budget discussion natural by everybody wants to speak and I cannot make a distinction between one side and the other.

ಟಿ. ಎಚ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಈ ಸಾರಿ ನಮ್ಮ ಮುಂದೆ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕಂಥ ಆಯವ್ಯಯ ಪಟ್ಟಿಯಲ್ಲಿ ಯಾವ ತೆರಿಗೆಯನ್ನೂ ಹಾಕಿಲ್ಲವೆಂದು ಹೇಳುತ್ತಾರೆ. ಈ ಮಾತನ್ನು ಅದು ಯಾವ ಧೈರ್ಯದಿಂದ ಅರ್ಥ ಸಚಿವರು ಹೇಳಿದರೋ ನನಗಂತೂ ಅರ್ಥವಾಗುವುದಿಲ್ಲ. ನಮಗೆ ಸ್ಟೇಟಾಗಲಿ, ಸೆಂಟರೇ ಆಗಲಿ, ಅವರು ಒಂದೇ ಯೂನಿಯನ್ನಿಗೆ ಸೇರಿದಂಥ ಜನ. ಅಲ್ಲಿ ಕಂದಾಯ ಹಾಕಿದರೂ ನಮ್ಮ ಮೇಲೆ ಬೀಳುತ್ತದೆ, ಇವರು ಇಲ್ಲಿ ಹಾಕಿದರೂ ನಮ್ಮ ಮೇಲೆ ಬೀಳುತ್ತದೆ. ಇವರಿಬ್ಬರೂ ಮಾತನಾಡಿಕೊಂಡು, ಒಂದೊಂದು ಟರ್ನ್ ಮೇಲೆ ತೆರಿಗೆ ಹಾಕುತ್ತಾರೆ. ಎಷ್ಟು ಹೊರೆ ಹೊರಬೇಕೋ ಅಷ್ಟನ್ನೂ ನಮ್ಮ ಮೇಲೆ ಅವರು ಹೊರಿಸಿ, ಇಲ್ಲಿ ಮಾತ್ರ "ನಾನು ಕಂದಾಯದ ಹೊರೆ ಹಾಕಿಲ್ಲ" ಎಂದು ಅನ್ನತಕ್ಕಂಥ ಮಾತು ಒಪ್ಪಿಕೊಳ್ಳತಕ್ಕಂಥಾದ್ದಲ್ಲ.

Mr. SPEAKER.—The Hon'ble Member may confine himself to this Budget, and leave to his colleagues in the Parliament to criticise the other Budget.

ಶ್ರೀ ಟಿ. ಎಚ್. ಮಾದಪ್ಪ ಗೌಡ.—ಈಗ ಹಳ್ಳಿಯವರೇ ಅದನ್ನು ತೆರಬೇಕಾಗಿದೆ, ಹಾಕಿಲ್ಲ ಎಂದು ಹೇಳತಕ್ಕಂಥ ಮಾತಿನಲ್ಲಿ ಸತ್ಯವಿಲ್ಲ ಎಂಬ ಮಾತನ್ನು ಮಾತ್ರ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಕಾಂಗ್ರೆಸ್ ಸರ್ಕಾರ ಒಟ್ಟಿನಲ್ಲಿ ಹಾಕಿರುವುದು.

ಶ್ರೀ ಟಿ. ಎಚ್. ಮಾದಪ್ಪ ಗೌಡ.—ನಮಗೆ ವ್ಯವಸಾಯದ ಸಂಬಂಧವಾಗಿ ಕೆಲವು ಅಂಕಿ ಅಂಶಗಳನ್ನು ಕೊಡುತ್ತಾರೆ. ನಮ್ಮ ಅರ್ಥಮಂತ್ರಿಗಳ ಕಸಬು ವ್ಯವಸಾಯವೇ ಅಥವ ವ್ಯಾಪಾರವೇ ನನಗೆ ಅರ್ಥವಾಗಿಲ್ಲ. ಅವರು ವ್ಯವಸಾಯಗಾರರಾಗಿದ್ದರೆ ಈ ತರಹ ಒಂದು ಅಂಕಿಅಂಶವನ್ನು ಕೊಡುತ್ತಾ ಇರಲಿಲ್ಲ. ವ್ಯವಸಾಯಗಾರರಾಗಿದ್ದರೆ ಅವರಿಗೆ ಕಷ್ಟ ಅರ್ಥವಾಗುತ್ತಿತ್ತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಸ್ವತಃ ಒಬ್ಬ ರೈತನಾಗಿ ಅನುಭವದಿಂದ ಹೇಳತಕ್ಕಂಥ ಮಾತು ಎಂದರೆ, ಈ ಪ್ರೊಡಕ್ಷನ್ ವರ್ಷ ವರ್ಷೇ ಜಾಸ್ತಿಯಾಗುತ್ತಾ ಇದೆ ಈ ಅಂಕಿ ಅಂಶಗಳನ್ನು ಕೊಟ್ಟವರು ಯಾರು ? ನಾವು ಅದೇ ಕಸುಬು ಇಟ್ಟುಕೊಂಡಿರುವವರು. 365 ದಿವಸವೂ ಜಮೀನು ಮಾಡುವ ಜನ. ಎಷ್ಟು ಕಷ್ಟಪಟ್ಟರೂ ವರ್ಷ ವರ್ಷ ಬೆಳೆ ಇಳಿಯುತ್ತಾ ಇರತಕ್ಕಂಥಾದ್ದನ್ನು ಅಂಕಿ ಅಂಶಗಳ ಸಮೇತ ನಾನು ಅರ್ಥ ಸಚಿವರಿಗೆ ಹೇಳಬಲ್ಲೆ. ಈ ಸಾರಿ ನಮ್ಮ ಜಿಲ್ಲೆಗೆ 'ಪ್ಯಾಕೇಜ್' ಡೀಲ್ ಸರ್ಕಾರದವರು ಕೊಟ್ಟಿದ್ದಾರೆ. ಸ್ವಾಮಿ, ಈ ಇಲಾಖೆ ಮುಖ್ಯಾಧಿಕಾರಿಗಳು ಎಲ್ಲಿ ಏನು ನಡೆಯುತ್ತಾ ಇದೆಯೆನ್ನುವುದನ್ನು ನೋಡಿದ್ದಾರೆಯೇ ? ಇವತ್ತಿನವರೆಗೆ ಅವರು ಮೀಟಿಂಗಿಗೆ ಬಂದಿಲ್ಲ; ಎಲ್ಲಿ ಏನು ಆಗುತ್ತಿದೆ ನೋಡಿಲ್ಲ. ಈ ತರಹ ಒಂದು ಸಂದರ್ಭ ಅಲ್ಲಿ ನಡೆಯುತ್ತಿದೆ. ಜೊತೆಗೆ ನನ್ನ ಚುನಾವಣಾ ಕ್ಷೇತ್ರದಲ್ಲಿ ಭತ್ತಕ್ಕೆ ಬೆಂಕಿರೋಗ ತಗುಲಿತು. ಅದರಲ್ಲಿ 600 ಎಕರೆ; ಹಿರೇಕೆರೆ ಮತ್ತು ಸೂಳೆಕೆರೆ ಹಿಂಭಾಗದಲ್ಲಿ ರೋಗಕ್ಕೆ ತುತ್ತಾಗಿ, ಅಷ್ಟು ಜಮೀನಿನಲ್ಲಿಯೂ 50 ಪಲ್ಲ ಭತ್ತ ಆಗಲಿಲ್ಲ. ಏನು ಔಷಧೋಪಚಾರ ಕಾಲತೀತ ಮಾಡಿದರೂ ಅದು ಪ್ರಯೋಜನಕ್ಕೆ ಬರಲಿಲ್ಲ. ನನ್ನ ರೀತಿಯಲ್ಲಿ ಹೇಳುವುದಾದರೆ ರಾಗಿ 40-50 ಪಲ್ಲ ಆಗುವ ಕಡೆ ಇವತ್ತು ಎಂಟುಪಲ್ಲವಾಗಿದೆ. ಇದರಲ್ಲಿ ಒಂದಕ್ಕೆರಡರಷ್ಟು ಕಂದಾಯ ಹೆಚ್ಚಾಗಿ ಕೊಡಬೇಕು. ನೀವು ಎಲ್ಲರಿಗೂ ಸೌಕರ್ಯ ಮಾಡಿ ಕೊಟ್ಟಿದ್ದೀರಿ. ಒಬ್ಬ ಕೂಲಿಗಾರನಿಗೆ ಸಂಘದ ಬಲವಿದೆ; ಅವನಿಗೆ ತೊಂದರೆಯಾದರೆ Arbitration Court ಗೆ ಹೋಗುತ್ತಾನೆ. ಕೂಲಿಗಾರರು ಸಂಘಟಿತರಾಗಿದ್ದಾರೆ. ಮತ್ತೆ ನೌಕರರು ಅಸೋಸಿಯೇಷನ್ ಮಾಡಿಕೊಂಡಿದ್ದಾರೆ. ರೈತ ಅಗಸನ ಕತ್ತೆ ಹಾಗೆ; ಏನು ಹಾಕಿದರೂ ಇವನು ಹೊರುತ್ತಾನೆ; ಇವನು ಮೂಕ, ಮಾತನಾಡುವ ಶಕ್ತಿಯೇ ಇಲ್ಲ. ಬಡ ಬೋರೆ ಗೌಡನ ದುಡ್ಡು, ಬಡ ಬೋರೆ ಗೌಡನ ದೇಶ, ಅಂತ ಹೇಳಿಬಿಟ್ಟರೆ, ಅಷ್ಟಕ್ಕೇ ಹಿಗ್ಗಿ ಹೋಗುತ್ತಾನೆಂದು ತಿಳಿದುಕೊಂಡು ಅವನ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಮೇಲೆ ಇಷ್ಟು ಹೊರೆ ಹಾಕತಕ್ಕಂಥಾದ್ದು ಬಹಳ ಅನ್ಯಾಯ. ಅದರ ಫಲವನ್ನು ದೇಶ ಒಂದಲ್ಲ ಒಂದು ದಿವಸ ಅನುಭವಿಸಬೇಕಾಗುತ್ತದೆ. ಈಗ ಒಂದಕ್ಕೆರಡರಷ್ಟು ಕಂದಾಯ ಹಾಕಿದ್ದೀರಲ್ಲ, ಅದರಿಂದ ಪರಿಣಾಮ ಏನಾಗಿದೆಯೆಂದರೆ, ಪ್ರತಿಯೊಬ್ಬ ರೈತನಿಂದ ಡಿಕ್ಲರೇಷನ್ ಫಾರಂ ತೆಗೆದುಕೊಂಡಿಲ್ಲ. ಖಾತೇದಾರ ಯಾವನೋ ಇರುತ್ತಾನೆ, ಹಿಸ್ಸೇದಾರ ಬೇರೆ ಇರುತ್ತಾನೆ. ಹಿಸ್ಸೇದಾರ ಕಂದಾಯ ಕೊಟ್ಟ ಮೇಲೆ ಡಬಲ್ ಕಂದಾಯ ಕೊಡುವುದಕ್ಕೆ ಖಾತೆದಾರನಿಗೆ ಬರುತ್ತದೆ. ಡಿಮ್ಯಾಂಡ್ ಏರಿಸುವುದಕ್ಕೆ ಮೊದಲು ಪ್ರತಿಯೊಂದು ರೈತನಿಂದ declaration form ತೆಗೆದುಕೊಂಡು ಅವನವನ ಧನ ಸ್ವತ್ತಿನ ಮೇಲೆ ತೆರಿಗೆ ಹಾಕಬೇಕು; ಅಂತ ಹೇಳಿ ಸರ್ಕಾರವನ್ನು ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೆ ಹೋದಸಾರಿ 20 ರೂಪಾಯಿ ಕಂದಾಯದ ಮೇಲೆ ಇರತಕ್ಕಂಥಾವರಿಗೆ, ರೂಪಾಯಿಗೆ 35 ನಯೆ ಪೈಸೆ ಹಾಕಬೇಕಂತ ಒಂದು ತೀರ್ಮಾನದ ಪ್ರಕಾರ, ಹೋದಸಾರಿ ಹಾಕಲಿಲ್ಲ. ಈ ಸಾರಿ ಅದನ್ನು ಡಿಮ್ಯಾಂಡಿಗೆ ತೆಗೆದುಕೊಂಡಿದ್ದಾರೆ. ಒಂದಕ್ಕೆರಡು ಕೊಡುವುದರ ಜೊತೆಗೆ, 35 ನಯೇ ಪೈಸೆ ಕೊಡಬೇಕು; ಭತ್ತ, ರಾಗಿ ಎಲ್ಲಾ ಬೆಳೆದು ಕಡಿಮೆಯಾಗಿರತಕ್ಕಂಥ ಈ ಸಂದರ್ಭದಲ್ಲಿ, ನಿತ್ಯ ವ್ಯವಹಾರಗಳನ್ನು ಮಾಡಿಕೊಂಡು ಅದನ್ನು ಹೇಗೆ ಕೊಡುವುದು ? ಸರ್ಕಾರಕ್ಕೆ ಕೊಡತಕ್ಕಂಥ ಕಂದಾಯವನ್ನು ರೈತನಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಎನ್ನುವುದು ಬಹಳ ಯೋಚನೆ ಮಾಡಬೇಕಾದಂಥ ವಿಚಾರ.

ಸ್ವಾಮಿ, ವ್ಯವಸಾಯದ ಸಂಬಂಧವಾಗಿ ಸುಮಾರು 14 ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡುತ್ತೇವೆ ಎಂದು ಹೇಳುತ್ತೀರಿ. ಇದರಲ್ಲಿ ಸ್ಕೀಂಗಳೇನೋ ಬಹಳ ಚೆನ್ನಾಗಿವೆ. ಅದರೆ ಅದನ್ನು ಕಾರ್ಯಗತ ಮಾಡುವುದರಲ್ಲಿ ಆಗತಕ್ಕ ಲೋಪದೋಷಗಳ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಇದರಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಸ್ಕೀಂ ಏನಿದೆ ಇದು ವ್ಯಥಾ ಅನ್ಯಾಯ ಎಂದು ಹೇಳಿ ನನ್ನ ಅನುಭವದಿಂದ ಹೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 150—200 ಹೀಗೆ ಸಂಬಳ ತೆಗೆದುಕೊಳ್ಳತಕ್ಕ ಜನ 80 ಜನರಿದ್ದಾರೆ. ಅವರೆಲ್ಲಾ ಕೆಲಸವಿಲ್ಲದೆ ಅಲೆಯುತ್ತಾ ಇದ್ದಾರೆ. ತಾಲ್ಲೂಕು ಬೋರ್ಡಿನವರಿಗೆ ಅಭಿವೃದ್ಧಿ ಸಂಬಂಧವಾಗಿ ಅವರ ಸಲಹೆ, ಸಹಕಾರಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದೀರಿ. ಈ ಹಣವನ್ನು ಅವರಿಗೇ ಕೊಟ್ಟರೆ—ಟಿಕ್ನಿಕಲ್ ವಿಚಾರಗಳನ್ನು ತಿಳಿಸುವುದಕ್ಕೆ ಸ್ವಲ್ಪ ಮಾತ್ರ ಶಿಬ್ಬಂದಿ ಇಟ್ಟುಕೊಂಡು—ಬಹಳ ಸುಸೂತ್ರವಾಗಿ ಕೆಲಸ ನಡೆಯುತ್ತದೆ ಎಂದು ನನಗೆ ಅನಿಸುತ್ತದೆ.

ಸಹಕಾರ ಇಲಾಖೆಯಲ್ಲಿ ಏನಾಗಿದೆ, ಪ್ರಜಾಪ್ರಭುತ್ವ ಬಂತು, ಸಾರ್ವಜನಿಕರಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಡಬೇಕು. ಅವರ ಕೆಲಸ ಅವರೇ ನಿರ್ವಹಿಸತಕ್ಕ ಶಕ್ತಿ ಜನಕ್ಕೆ ಬರಬೇಕು ಎಂಬ ವಾದವನ್ನು ನಾನು ಒಪ್ಪುತ್ತೇನೆ. ಆದರೂ ಇವತ್ತು ದೇಶದಲ್ಲಿರತಕ್ಕ ಒಂದು ಪರಿಸ್ಥಿತಿಯಲ್ಲಿ ಜನ ಇದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಆದ್ದರಿಂದ ಈ ಸೆಕ್ರೆಟರಿಗಳ ಜಾಗಕ್ಕೆ ಸರ್ಕಾರದ ಅಧಿಕಾರಿಗಳೇ ಇರಬೇಕು. ಖಾಸಗಿಯವರ ಕೈಗೆ ಈ ಜವಾಬ್ದಾರಿ ಕೊಡಕೂಡದು ಎಂದು ಬಹಳ ವಿನಯದಿಂದ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮ್ಮ ಸೀಡ್ ಫಾರಂನಿಂದ ಇಲಾಖೆಯವರು ಸಪ್ಲೈಮಾಡಿದ ಸೀಡ್ಸ್ ತೆಗೆದುಕೊಂಡುಹೋಗಿ ಹಾಕಿದರೆ ಮೊಳಕೆ ಕೂಡ ಬರಲಿಲ್ಲ. ನಾನೇ ಸ್ವತಃ ನೋಡಿದ್ದೇನೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಹಿಂದೆ ಮಾನ್ಯ ಮಿತ್ರರು ಸಲಹೆಕೊಟ್ಟಹಾಗೆ ಸೀಡ್‌ಫಾರಂನಲ್ಲಿ ಉತ್ಪನ್ನವಾದ ಬೀಜ ಸರಿಯಾಗಿದೆಯೇ ಇಲ್ಲವೇ ಎಂಬ ಸಂಶೋಧನೆ ನಡೆಸಿ ಉತ್ತಮವಾದ ಬೀಜವನ್ನು ರೈತರಿಗೆ ಹಂಚತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ವ್ಯವಸಾಯದ ಇಲಾಖೆಯವರು ನಡೆಸಿಕೊಂಡು ಬರುತ್ತಿರುವ ಫಾರಂಗಳಲ್ಲಿ ಖರ್ಚು ಏನು ಮಾಡುತ್ತಾರೆ, ಶಿಬ್ಬಂದಿ ಎಷ್ಟಿದೆ, ಆ ಫಾರಂಗಳ ವಿಸ್ತೀರ್ಣ ಎಷ್ಟು ಅದರಿಂದ ಬರತಕ್ಕ ಫಸಲು ಎಷ್ಟು ಎಂಬ ಈ ಲೆಕ್ಕ ಪತ್ರಗಳನ್ನು ಒದಗಿಸಿಲ್ಲ. ಒದಗಿಸಿದರೆ ಆಗ ತಮಗೇ ಅರ್ಥವಾಗುತ್ತದೆ. ಈ ಜಮೀನನ್ನೇ ಅವಲಂಬಿಸಿಕೊಂಡು ಜೀವನ ಮಾಡತಕ್ಕ ರೈತನ ಕಷ್ಟ ಏನು ಎಂಬುದು ತಮಗೆ ಬಹಳಮಟ್ಟಿಗೆ ಅರ್ಥವಾಗುವುದರಲ್ಲಿ ಅನುಮಾನವಿಲ್ಲ. ನಮ್ಮ ಪಿ.ಡಬ್ಲ್ಯು.ಡಿ. ಮಿನಿಸ್ಟರು ದುಡ್ಡು ಇಲ್ಲ. ಈ ಮೂರು ವರ್ಷ ಸುಮ್ಮನೆ ಕುಳಿತಿರಬೇಕಾಗುತ್ತದೆ ಎಂದು ಹೇಳುತ್ತಾರೆ. ಆರ್.ಸಿ.ರೋಡ್ಸ್‌ನಲ್ಲಿ ಕೆಲವುಕಡೆ ಚಪ್ಪಡಿ ಹಾಕದೇ ಸಂಚಾರ ನಿಂತುಹೋಗಿದೆ. ಇಂಥಾ ಸಣ್ಣಪುಟ್ಟ ಕೆಲಸಗಳಿಗಾದರೂ ಕೂಡ ದುಡ್ಡು ಕೊಟ್ಟು ಚಪ್ಪಡಿ ಹಾಕಿಸುವ ಕೆಲಸ ಮಾಡಿಸಿಕೊಟ್ಟು ಸಂಚಾರ ಸೌಲಭ್ಯ ಒದಗಿಸಿಕೊಡಬೇಕೆಂದು ಹೇಳಿ ಆಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಆಮೇಲೆ ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ನಾವು ನಿಮಗೆ ದೇಶದ ಆಡಳಿತ ಸೂತ್ರ ವಹಿಸಿಕೊಂಡು ದೇಶದ ರಕ್ಷಣೆ ಮಾಡಿ ಎಲ್ಲರನ್ನೂ ಸರಿಸಮನಾದ ಭಾವನೆಯಿಂದ ನೋಡಿ ಜನಕ್ಕೆ

ಅನುಕೂಲಮಾಡಿಕೊಡಿ ಎಂದು ಅಧಿಕಾರಕೊಟ್ಟರೆ ನಾವು ಬಾಡಿಗೆಯನ್ನೇ ಹೊಡೆಯುತ್ತೇವೆ ಎಂಬ ಮನೋಭಾವ ಸರ್ಕಾರದವರಿಗೆ ಏಕೆ ಬರಬೇಕೋ ಗೊತ್ತಾಗುತ್ತಿಲ್ಲ. ಪ್ರೈವೇಟ್ ಎಂಟರ್‌ಪ್ರೈಸ್‌ನವರು ಅಚ್ಚುಕಟ್ಟಾಗಿ ಬಸ್‌ಗಳನ್ನು ಓಡಿಸುತ್ತಾರೆ. ನೀವು ಹೇಳಿದಹಾಗೆ ಮಾಡುತ್ತಾರೆ. ಹಾಗಿರುವಾಗ ನಿಮಗೆ ಕಂದಾಯ ಹಾಕುವುದಕ್ಕೆ ಅಧಿಕಾರವಿದೆ. ನಿರ್ದಾಕ್ಷಿಣ್ಯವಾಗಿ ತೆರಿಗೆ ಹಾಕುತ್ತೀರಿ, ತೆರಿಗೆ ತೆಗೆದುಕೊಳ್ಳಿ. ಆದರೆ ಒಬ್ಬ ಸಣ್ಣ ಕಂಡಕ್ಟರ್‌ನಿಂದ ಹಿಡಿದು ಅತ್ಯುನ್ನತ ಅಧಿಕಾರಿಯವರೆಗೂ ಪ್ರತಿಯೊಬ್ಬರಿಗೂ ಮಾಮೂಲುಗಳೇ ಜಾಸ್ತಿಯಾಗಿಹೋಗಿದೆ. ಹೀಗಾದರೆ ಟ್ರಾನ್ಸ್‌ಪೋರ್ಟ್‌ನಲ್ಲಿ ಹಾಕಿದ ಬಂಡವಾಳದ ಗತಿ ಏನು? ಬಂಡವಾಳ ಉಳಿಯುತ್ತದೆಯೇ? ದೇಶಕ್ಕೆ ಎಷ್ಟು ತೊಂದರೆ ಎಂಬುದನ್ನು ದಯವಿಟ್ಟು ಸರ್ಕಾರದವರು ಯೋಚನೆ ಮಾಡಬೇಕು. ಇನ್ನುಮುಂದಾದರೂ ಈ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ಸಾರ್ವಜನಿಕರಿಗೆ ಬಿಟ್ಟುಕೊಡುವುದು ಒಳ್ಳೆಯದು. ಇದರಲ್ಲಿ ಯಾವತ್ತು ಕೂಡ ನಿಮ್ಮ ನೀತಿ, ಧರ್ಮದ ಮಟ್ಟ ಎಲ್ಲಿಯವರೆಗೆ ಕೀಳುಮಟ್ಟದಲ್ಲಿರುತ್ತದೆ ಅಲ್ಲಿಯವರೆಗೂ ಕೂಡ ಯಶಸ್ಸನ್ನು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಯಾವುದಕ್ಕೂ ನಮ್ಮಹತ್ತಿರ ದುಡ್ಡಿಲ್ಲ, ಹೊಸ ಹೊಸ ತೆರಿಗೆಗಳನ್ನು ಜನ ಕೊಡಬೇಕು, ದೇಶಕ್ಕೆ ತುರ್ತುಪರಿಸ್ಥಿತಿ ಬಂದಿದೆ ಎಂದು ಹೇಳತಕ್ಕ ನಮ್ಮ ಮಾನ್ಯ ಮಂತ್ರಿಗಳು ಬರೀ ಪ್ರತಿಷ್ಠೆಗಾಗಿ ಪಾನನಿರೋಧವನ್ನು ಇಟ್ಟುಕೊಂಡಿರುವುದು ಮನಸ್ಸಿಗೆ ಬಹಳ ಯಾತನೆಯಾಗುತ್ತಿದೆ. ಇವತ್ತು ಇದರಲ್ಲಿ ಯಶಸ್ಸುಗಳಿಸುವುದಕ್ಕೆ ಸಾಧ್ಯವೇ? ಈ ಒಂದು ತತ್ವದಿಂದ ದೇಶದಲ್ಲಿ ಎಷ್ಟು ಅನಾಚಾರ, ಅನೀತಿ, ಸುಳ್ಳು, ದಗ, ಕಳ್ಳತನ ಹೆಚ್ಚಾಗಿದೆ. ದೇಶದ ಅಭಿಮಾನ ಇಟ್ಟುಕೊಂಡು ಬಂದಿರತಕ್ಕ ನಮ್ಮ ನಾಯಕರು ಏಕೆ ಇನ್ನು ಇದನ್ನು ಮಾನ್ಯ ಮಾಡುತ್ತಾರೆ; ನೀವು ಎಲ್ಲಿಯವರೆಗೆ ಈ ನೀತಿಯನ್ನು ಉಳಿಸಿಕೊಂಡು ಹೋಗುತ್ತೀರೋ ಅಲ್ಲಿಯವರೆಗೂ ಅಧರ್ಮ ಜಾಸ್ತಿಯಾಗುತ್ತಿದೆಯೇ ಹೊರತು, ನ್ಯಾಯಕ್ಕೆ ಎಳ್ಳಷ್ಟು ಬೆಲೆ ದೊರೆಯುವುದಿಲ್ಲ. ಒಬ್ಬ ಕುಡಿಯುತಕ್ಕ ಕಡೆ ನೂರಾರುಜನ ಕುಡಿಯುತಕ್ಕ ನಿದರ್ಶನ ಇದೆ. ಪ್ರತಿಯೊಂದು ಮನೆಯೂ ಒಂದು ಡಿಸ್ಟಿಲರಿಯಾಗಿದೆ. ಪಾನನಿರೋಧ ಹೋಗುವುದರಿಂದ ಸುಖವಾಗಿ ಇರುತ್ತಾನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ 8-10 ಕೋಟಿ ರೂಪಾಯಿಗಳ ಆದಾಯ ಸುಲಭವಾಗಿ ಬರುತ್ತದೆ. ಒಳ್ಳೆಯದು, ಕೆಟ್ಟದ್ದು ಯಾವ ಬಾಬಿನಿಂದ ಬರುತ್ತದೆ ಎಂಬ ಪ್ರಶ್ನೆ ಇಲ್ಲಿ ಇಲ್ಲ. ಎಷ್ಟು ಕಿತ್ತು ಹಾಕಿದರೂ ಮತ್ತಷ್ಟು ಮೂಡುತ್ತಿವೆ ಎಂಬ ಮನೋಭಾವ ಸಮಾಜದಲ್ಲಿರುವಾಗ ಇದಕ್ಕೆ ಅಂಟಿಕೊಂಡು ಕಲಿತುಕೊಳ್ಳುವುದು ನ್ಯಾಯವಲ್ಲ ಎಂದು ನಾನು ಹೇಳಬಯಸುತ್ತೇನೆ.

Sri **ALLUM KARIBASAPPA** (Kurugodu).—Mr. Speaker, Sir, I support the Budget placed before this House by the Finance Minister. While supporting, I would like to bring a few points for kind consideration of the Government. Regarding the Iron-ore carrying road from Hospet to Gadag, the work of which is pending since about more than three years, I am extremely sorry that it is not yet completed. Even the Ex-Minister for P.W.D., Sri H. M. Channabasappa, had announced on the floor of this Hon'ble House that it would be completed within a course of a few months. But, I am sorry, that even now—after three years—it is not yet completed and I do not know when it is going to be completed. Further, another road from Hubli to Karwar, which is a concrete road, is now given the maximum importance by our Government, because it is an iron-ore carrying road and earning foreign exchange to our country. In this connection, I should like to bring to the notice of the Hon'ble Minister for P.W.D. one instance.

Last Sunday, I had been to Karwar along with the S. T. C. officers from Delhi and Madras. I am sorry to say that the deviation of 14 miles stretch somewhere in the Arbele ghat near Yellapur has taken place and it takes not less than 1½ years to complete that stretch of 14 miles. I am sorry to see how the contractor is progressing with his contract. In this connection Sri Sirur, President of the Karnatak Chamber of Commerce has also referred this matter to the Government. I request the Government to take immediate steps and see that the

(SRI ALLUM KARIBASAPPA)

road is completed within this month or by the end of next month. The monsoons will start from May. I reliably understand from higher circles either the Government of India or the S. T. C. has allotted huge funds to develop the mining approach roads to main roads. Here I have to say again that our State has not taken any steps for the improvement of these roads.

Mr. SPEAKER.—Who has allotted? Is it the S. T. C. or the Government of India?

Sri ALLUM KARIBASAPPA.—I am not sure, Sir. It is either the S. T. C. or the Government of India.

Sri S. NIJALINGAPPA (Chief Minister).—The point is, we are bearing the entire burden and we are still to get 50 per cent of money from them. We are bearing the entire burden and we are doing everything possible.

Mr. SPEAKER.—He is now talking of approach roads from mines.

Sri S. NIJALINGAPPA.—I do not think the Centre will do it.

Sri ALLUM KARIBASAPPA.—I request the Government to look into it and see that some amount is spent for the improvement of mining approach roads.

Mr. SPEAKER.—If not already given, press for it. That is the suggestion.

Sri ALLUM KARIBASAPPA.—Sir, at the same time, I request the Government to develeop Karwar port which is mainly useful for the export of iron ore of our country in Hospet-Bellary sector in which I am more interested. My request is that Karwar should be converted into an all-weather port. Then only we will be able to ship the maximum amount of iron ore from that port and earn foreign exchange. In this connection, I also request the Government and our Members of Parliament at Delhi to urge the Central Government to continue the broad guage line from Hospet to Hubli and also from Miraj to Bangalore and also link up Hubli to Karwar which is very necessary. In this connection, I must say that we have already been agitating. I also urge upon the Government to take immediate further steps in the matter to see that it is completed as early as possible if not in the Third Plan at least in the fourth Plan. It is evident that Maharashtra Government has succeeded in getting the broad guage line from Poona to Miraj though it serves no purpose of business excepting providing convenience to their people to go to Bombay. That is why I request our Parliament members also who are in Delhi to press upon the Government of India and to do their best to connect Hubli and Karwar and also to convert Hospet-Hubli line into broad guage.

Under the Second-Five Year Plan there was a scheme in the P.W.D. to have fifty miles of roads in each taluk. Under this scheme the roads were taken up in each taluk to the extent of 50 miles spending about Rs. 6,000 per mile. In this connection, I am sorry to say the entire

length of roads that are now constructed are not motorable and I therefore request the Government to spend a little more money to see that the road is made motorable so that buses also could ply on the roads. Hence I request the Government to make a note of this that they should take up such roads which have already been taken up by the P. W. D. under the second plan.

As you all know, there are now and then floods, famine in our State. Specially in Bellary taluk famine is too frequent, I request the Government to have a special permanent budget to be put into use immediately whenever necessary so that it will be of much use to the people who are in distress at that time without trying to make out schemes just at a time when suffering descends upon people.

Regarding the Bellary Municipal Council, I am sorry that there is a lot of misappropriation and so many things. I think the concerned Minister is also aware of this. I think it is advisable that it is superseded in the interest of the development of Bellary.

Sir, I understand that there is going to be a steel plant somewhere near Hospet-between Hospet and Goa sector: We are agitating for this for a long time past. I read in papers this morning also about the steel plant. I only request the Government that it will be a suitable place if it is constructed between Bellary and Hospet. It will be the central point for the iron ore and Hospet and Bellary can both be developed if it is constructed between the two places.

Lastly Sir, I request the Government to take up two causeways in Bellary taluk—one across Hagari river near *Moka* and another at *Uppinagudi* which connects the Andhra with Bellary and connect Bellary and Adoni and Bellary Anantapur.

I thank the chair for giving me this opportunity.

Mr. SPEAKER.—Now the Hon'ble Minister for Education. He is intervening in the debate.

† ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ನಾನು ಈಗ ವಿಶೇಷವಾಗಿ ಯಾವ ಮಾತುಗಳನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನೀಗ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಉಳಿದೆಲ್ಲ ವಿಚಾರಗಳನ್ನೂ ಮಾನ್ಯ ಹಣ ಕಾಸಿನ ಸಚಿವರು ಹೇಳುತ್ತಾರೆ. ಈಗ ನಾನಾದರೂ ಈ ಎರಡು ಮಾತುಗಳನ್ನು ಏಕೆ ಹೇಳ ಬೇಕಾದ ಪ್ರಸಂಗ ಬಂದಿದೆ ಅಂದರೆ ಮಹನೀಯರಾದ ಕಯ್ಯಾರ ಕಿಞ್ಞಣ್ಣರೈ ಅವರ ಪುಸ್ತಕವನ್ನು ಪಠ್ಯ ಪುಸ್ತಕವನ್ನಾಗಿ ಇಟ್ಟಿರುವುದರಿಂದ ಬಹಳ ಅನ್ಯಾಯವಾಗಿದೆ ಎಂತ ಒಂದು ಮಾತು ಬಂದಿದೆ. ಅದರ ಸಮಾಚಾರ ಹೀಗಿದೆ: ಈಗ ಪಠ್ಯ ಪುಸ್ತಕವಾಗಿ ಪ್ರಿಸ ಕ್ರೈಬ್ ಆಗಿರತಕ್ಕ ಕನ್ನಡ ಎರಡನೆಯ ಪುಸ್ತಕ ಹತ್ತೊಂಭತ್ತು ಸಾವಿರದ ಐವತ್ತೆಂಟರಲ್ಲಿ ಪ್ರಿಂಟ್ ಆಗಿದೆ. ಆ ಪುಸ್ತಕದ ಅನೇಕ ಪ್ರತಿ ಗಳು ಅನೇಕರಲ್ಲಿರುತ್ತವೆ. ಆದರೆ ಅಲ್ಲಿಂದ ಇಲ್ಲಿಯವರೆಗೂ ಆ ಪುಸ್ತಕದ ವಿಚಾರದಲ್ಲಿ ಯಾರೂ ಯಾವ ತರದ ಆಕ್ಷೇಪಣೆಯನ್ನು ಮಾಡಿಲ್ಲ. ಈ ಪಠ್ಯ ಪುಸ್ತಕಗಳನ್ನು ಆರಿಸತಕ್ಕ ಬಗ್ಗೆ ಒಂದು ಕಮಿಟಿಯಿದೆ ಅದು ಟೆಕ್ಸ್ಟ್ ಬುಕ್ ಕಮಿಟಿ. ಆ ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ಡಿ. ಪಿ. ಐ. ರವರೂ ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳೂ ಇದ್ದಾರೆ. ಅವರು ಈ ಪುಸ್ತಕವನ್ನು ಅಂಗೀಕರಿಸುವದಕ್ಕಿಂತ ಮೊದಲೇ ಅವರಿಗೆ ಸಂಶಯ ಬಂದ ವಿಚಾರಗಳನ್ನೆಲ್ಲಾ ಕುರಿತು ಚರ್ಚೆ ಮಾಡಿದ್ದಾರೆ. ಅಗ ಈ ಕಯ್ಯಾರ ಕಿಞ್ಞಣ್ಣರೈ ಅವರು ಬರೆದಿರುವ ಒಂದು ಪದ್ಯ ಹೀಗಿದೆ.

(ಶ್ರೀ ಎಸ್. ಆರ್ ಕಂಠಿ.)

" ಕೇಸರಿ ಬಿಳಿ
ಹಸುರು ಮೂರು
ಬಣ್ಣ, ನಡುವೆ ಚಕ್ರವು !
ಸತ್ಯ ಶಾಂತಿ
ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು ‖

ಈ ಪದದಲ್ಲಿರತಕ್ಕ ಚರಕ ಶಬ್ದದ ಬಗ್ಗೆ ಕೆಲವರು ಆಕ್ಷೇಪಣೆ ಎತ್ತಿದ್ದರು. ಅದಕೆ ಶ್ರೀ ಕಯ್ಯಾರ ಕಿಞ್ಞಣ್ಣರೈ ಅವರು ಆ 'ಮಾರ್ಕಿನ' ಅರ್ಥವಿವರಣೆಯನ್ನು ಕೊಟ್ಟಿದ್ದಾರೆ. ಆಗ ಟೆಕ್ಸ್ಟ್ ಬುಕ್ ಕಮಿಟಿಯವರು ಅದನ್ನು ಅಂಗೀಕರಿಸಿ ಅದನ್ನು ಪಠ್ಯಪುಸ್ತಕವನ್ನಾಗಿಡಲು ಡಿ. ಪಿ. ಐ. ಅವರು ಸರ್ಕಾರಕ್ಕೆ ಸಿಫಾರ್ಸು ಮಾಡಿ ಅದನ್ನು ಸರ್ಕಾರವು ಒಪ್ಪಿಕೊಂಡ ಮಾತ್ರಾಗಿದೆ. ಸರ್ಕಾರ ಆ ರೀತಿ ಒಪ್ಪಿದ್ದು ಸರಿಯಲ್ಲ ಅಂತ ಹೇಳಿ ಈ ದಿವಸ ಅದರ ಜವಾಬ್ದಾರಿಯು ನನ್ನ ಮೇಲೆ ಇದೆ ಅಂತ ಹೇಳುವುದು ಸರಿಯಲ್ಲ, ಆ ರೀತಿ ಹೇಳುವುದಕ್ಕೆ ಆಗುವುದಿಲ್ಲ.

ಇನ್ನು ಡಿ. ಪಿ. ಐ ಅವರ ಮೇಲೂ ಒಂದೆರಡು ಮಾತುಗಳು ಬಂದಿರುತ್ತವೆ.

ಅಧ್ಯಕ್ಷರು.—ಇಲಾಖೆಯ ಮೇಲೆ ಆರೋಪಣೆ ಮಾಡಿ ರಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅವರ ಹೆಸರನ್ನು ಹೇಳಿ ಅಂಥವರನ್ನು ಆ ಸ್ಥಾನದಲ್ಲಿ ಇಡಲೇ ಬಾರದು ಅವರಿಗೆ ಎಕ್ಸ್‌ಟೆನ್ಷನ್ ಕೊಟ್ಟಿದ್ದಾರೆ ಎನ್ನತಕ್ಕ ಮಾತುಗಳೂ ಬಂದಿವೆ. ಆ ಡಿ. ಪೀ. ಐ ರವರು 1962ರಲ್ಲೇ ರಿಟೈರ್ ಆಗಬೇಕಾಗಿತ್ತು. ಆದರೆ ಅವರಿಗೆ ಎಕ್ಸ್‌ಟೆನ್ಷನ್ ಕೊಟ್ಟಿದ್ದಾರೆ ಎನ್ನತಕ್ಕ ಮಾತುಗಳು ಬಂದಿವೆ. ಅದೆಲ್ಲ ತಪ್ಪಭಿಪ್ರಾಯ ಈ ದಿವಸ ಯಾರಾದರೂ ಆ ಶಿವಿಲ್ ಲಿಸ್ಟನ್ನು ತೆಗೆದುಕೊಂಡು ನೋಡಲಿ ಗೊತ್ತಾಗುತ್ತದೆ. ಡಿ.ಪಿ.ಐ. ರವರು ರಿಟೈರ್ ಆಗತಕ್ಕ ಕಾಲ 1963ನೆಯ ಏಪ್ರಿಲ್ ತಿಂಗಳಲ್ಲಿ ಹೀಗಿದ್ದರೂ ವಿದ್ಯಾ ಮಂತ್ರಿಗಳು ಅವರನ್ನು ತಮ್ಮವರಂತ ಎಕ್ಸ್‌ಟೆನ್ಷನ್ ಕೊಟ್ಟು ಇಟ್ಟು ಕೊಂಡಿದ್ದಾರೆಂತ ಹೇಳಿರತಕ್ಕದ್ದು ಸರಿಯಾದ್ದಲ್ಲ.

ಇನ್ನು ಎರಡು ಪತ್ರಗಳನ್ನು ಬರೆದಿರತಕ್ಕ ವಿಚಾರ ಇಲ್ಲಿ ಬಂದಿದೆ.

10 A.M.

ಒಂದು ಪತ್ರವನ್ನು ಶ್ರೀಮಾನ್ ಜವಳಿಯವರಿಗೆ ಬರೆಯಲಾಗಿದೆ. ಮತ್ತೊಂದು ಪತ್ರವನ್ನು ಶ್ರೀ ಶಿವರಾಂ ಅವರಿಗೆ ಬರೆಯಲಾಗಿದೆ. ಆಗಸ್ಟ್ ತಿಂಗಳಿನಲ್ಲಿ ರಿಟೈರ್ ಆಗುವುದಕ್ಕೆ ನಿಮಗೆ ಪರವಾನಗಿಯನ್ನು ಕೊಡುತ್ತೇವೆಂದು ತಿಳಿಸಿ ಎರಡು ಪತ್ರಗಳನ್ನೂ ಅವರಿಗೆ ಬರೆದದ್ದು ನಿಜ. ವಿದ್ಯಾ ಖಾತೆಯವರು ಈ ಎರಡು ಪತ್ರಗಳನ್ನೂ ಬರೆದಿದ್ದಾರೆ. ಆದರೆ ವಿದ್ಯಾ ಇಲಾಖೆಯ ಡೈರೆಕ್ಟರಿಗೆ ಅಂಥ ಪತ್ರ ಏಕೆ ಬರೆದಿಲ್ಲವೆಂದು ಕೆಲವರು ಕೇಳಿದ್ದಾರೆ. ಇದರಲ್ಲಿ ಒಂದು ಮಾತು ಎಂದರೆ, ಇಲಾಖಾ ಮುಖ್ಯಾಧಿಕಾರಿಗಳಿಗೆ G.A.D.ಯಿಂದ ಬರೆಯಬೇಕು. ನಾನು ಈ ಬಗ್ಗೆ ವಿಚಾರ ಮಾಡಿಸಿದ್ದೇನೆ. ಅವರಿಗೂ ಇಷ್ಟರಲ್ಲಿಯೇ ಬರೆಯುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ರಿಟೈರ್ ಆಗುವ ಅಧಿಕಾರಿಗಳಿಗೆ ಮುಂಚೆಯೇ ತಿಳಿಸಬೇಕಾದ್ದು ಅತ್ಯವಶ್ಯವಿದೆ. ಹಾಗೆ ಬರೆಯದೆ ಇದ್ದರೆ ಪೆನ್ಷನ್‌ಗೆ ತೊಂದರೆಯಾಗುತ್ತದೆ. ಅವರ ಪೆನ್ಷನ್ ಪೇಪರ್‌ಗಳನ್ನು ಸಿದ್ಧಗೊಳಿಸಬೇಕಾಗುವುದರಿಂದ ಇಂಥ ಪತ್ರಗಳನ್ನು ಕೆಲವು ತಿಂಗಳ ಮುಂಚೆಯೇ ಬರೆಯಬೇಕಾಗುತ್ತದೆ. ಮತ್ತು ಅಕೌಂಟೆಂಟ್ ಜನರಲ್ ಅವರು, ಈ ತರಹ ಪತ್ರಗಳನ್ನು ನೀವು ಬರೆದು ಪೆನ್ಷನ್ ಪೇಪರ್ ಸಿದ್ಧಪಡಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಮಗೆ ಬರೆದಿದ್ದಾರೆ. ಯಾರಾದರೂ ಇದರಲ್ಲಿ ಏನೋ ಭೂತ ಇದೆ, ಏನಾದರೂ ತಿಳಿದುಕೊಂಡಿದ್ದರೆ ಅರ್ಥವೇನೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲದೆ ಈ ಪತ್ರಗಳನ್ನು ಬರೆದಾಗ್ಗೂ ಕೂಡ ಆ ಅಧಿಕಾರಿಗಳನ್ನು ಇಟ್ಟುಕೊಳ್ಳುವುದಕ್ಕೆ, ಅಥವಾ extension ಕೊಡುವುದಕ್ಕೆ, re-employ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಸರ್ಕಾರದವರು ಅದಕ್ಕೆ ಒಂದು ನಿರ್ಣಯ ಮಾಡಿಕೊಂಡಿದ್ದಾರೆ ಮತ್ತು ಆ ನಿರ್ಣಯದಂತೆ ನಡೆದುಕೊಳ್ಳುತ್ತಾರೆ.

Joint Director ವಿಚಾರವಾಗಿ ಕೆಲವರು ಹೇಳಿದ್ದಾರೆ. senior-most officer ಯಾರಿರುತ್ತಾರೆ ಅವರನ್ನು Joint Director ಮಾಡುವುದು ಪದ್ಧತಿ ಇದೆ. ಇದರಲ್ಲಿ ಯಾವುದೇ ತರಹ ಕೆಟ್ಟ ಮಾರ್ಗವನ್ನು ಹಿಡಿದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಅಂಥಾದ್ದು ಯಾವುದಾದರೂ ಮಾರ್ಗವನ್ನು ಹಿಡಿದುಕೊಂಡಿದ್ದೇವೆಂದು ಯಾರಾದರೂ ಬಂದು ನನ್ನ ಜೊತೆ ವಿಚಾರ

ಮಾಡಿ. ನನ್ನ ಮಾರ್ಗ ತಪ್ಪು ಎಂದರೆ ತಿದ್ದಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಇದರಲ್ಲಿ ಅಕಸ್ಮಾತ್ತಾಗಿ ಯಾರೋ ಒಬ್ಬರು ಜಾಯಿಂಟ್ ಡೈರೆಕ್ಟರಾಗಿ—ನನಗೆ ಜಾತಿ ಇಲ್ಲ—ನನ್ನ ಜಾತಿಯವರನ್ನು ಮಾಡಿದ್ದೇನೆಂದು ಭಾವನೆ ಮಾಡಿದರೆ ಅದು ಸರಿಯಾದುದಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ನಿಮಗೆ ಜಾತಿ ಇಲ್ಲವೇ ? ನಿಮ್ಮ ಜಾತಿ ನಿಮಗೆ ಗೊತ್ತಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನನಗೆ ವೈಯಕ್ತಿಕವಾಗಿ ಜಾತಿ ಇದೆ, ರಾಜಕೀಯವಾಗಿ ಇಲ್ಲ. ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ವಿಚಾರವಾಗಿ ಒಂದು ಮಾತು. ಇದರಲ್ಲಿ ಏನಾಗಿದೆ ಎಂದರೆ Director of Technical Education ಸ್ಥಾನಕ್ಕೆ ಇಷ್ಟು ದಿವಸವೂ ಚೀಫ್ ಇಂಜಿನಿಯರ್ ಗ್ರೇಡ್‌ನವರನ್ನು ಹಾಕುತ್ತಿದ್ದೆವು. ಈಗ Superintending Engineer ಗ್ರೇಡಿನವರನ್ನು ಹಾಕಬೇಕೆಂದು ಬಂದಿದೆ. ಇದನ್ನು ನಾನು ಒಪ್ಪುತ್ತಿಲ್ಲ. ಇಂಥಾ ದೊಡ್ಡ ಸ್ಥಾನದಲ್ಲಿರುವಂಥ ಮನುಷ್ಯ ಚೀಫ್ ಇಂಜಿನಿಯರ್ ಗ್ರೇಡಿನವರಿರಬೇಕು ಎಂದು ಪತ್ರವ್ಯವಹಾರ ನಡೆಯುತ್ತಿದೆ. ಇದಕ್ಕಾಗಿ ಕೊಂಚ ತಡವಾಗಿದೆ. ಅಲ್ಲದೆ ಕೇಂದ್ರಸರ್ಕಾರದವರು ದಿನೇದಿನೇ ನಮಗೆ ಅನೇಕ ಸೂಚನೆಗಳನ್ನು ತಾಂತ್ರಿಕ ಶಿಕ್ಷಣದ ಬಗ್ಗೆ ಕಳಿಸುತ್ತಾರೆ. ಅವುಗಳನ್ನು ಕಾರ್ಯರೂಪಕ್ಕೆ ತರಬೇಕು. ಯಾವ ಮನುಷ್ಯ ಚೆನ್ನಾಗಿ ಅರಿತಿದ್ದಾನೆ ಆತನನ್ನು ಕೆಲವು ದಿವಸ ಇಟ್ಟುಕೊಳ್ಳುವುದು ಅತ್ಯವಶ್ಯವೆಂದು ತಿಳಿದು, ಆ ಒಂದು ಕಾರಣದಿಂದಲೂ ಇಟ್ಟುಕೊಳ್ಳಲಾಗಿದೆ. ಅವರನ್ನು ಇಟ್ಟುಕೊಳ್ಳುವುದರಿಂದ ಎರಡನೆಯವರಿಗೆ ಅವಕಾಶ ತಪ್ಪಬೇಕು ಎನ್ನುವುದು ಯಾವುದೂ ಇಲ್ಲ. ಸಧ್ಯಕ್ಕೆ ಒಂದು ಅನುಕೂಲವಾಗಿದೆ. ಈಗ ಇದ್ದವರನ್ನೇ ಇಟ್ಟುಕೊಳ್ಳುವುದರಿಂದ ಅವರಿಗೆ additional charge ಇದೆ. ಬೇರೆ ಸಂಬಳ ಕೊಡುವ ಕಾರಣವಿಲ್ಲ. ಉಳಿತಾಯವಿದೆ.

ಶ್ರೀ ಎಸ್. ಶಿವಪ್ಪ.—ಕೆಲಸವಾಗುತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಕೆಲಸವಾಗುತ್ತಿದೆ. ಕೆಲಸವಾಗದೆ ಇದ್ದರೆ ನಾನು ಇಟ್ಟುಕೊಳ್ಳುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಅದು ತಮ್ಮ ಅಭಿಪ್ರಾಯ.

ಶ್ರೀ ಎಸ್. ಆರ್. ಕಂಠಿ.—ಕೆಲಸ ಮಾಡುತ್ತಿಲ್ಲವೆಂದು ನೀವು ಹೇಳಿಬಿಟ್ಟರೆ ಬಿಟ್ಟುಬಿಡೋಣ. ಇದರಲ್ಲಿ ದೋಷವೇನೋ ಇದೆ ಎನ್ನುವ ಕಾರಣದ ಸಲುವಾಗಿ ಹೇಳುತ್ತಿದ್ದಾರೆ. ಅಂಥಾದ್ದೇನೂ ಇಲ್ಲ. ಅಂಥಾದ್ದೇನಾದರೂ ಇದ್ದರೆ ನನ್ನನ್ನು ವೈಯಕ್ತಿಕವಾಗಿ ಕೇಳಿದರೆ ನಾನು ಹೇಳುತ್ತೇನೆ. ಆದರೆ ಭಾಷಣ ಮಾಡಿ ಏನೇನೋ ಕಲ್ಪನೆ ಮಾಡುವುದು ಅಷ್ಟು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

ಇನ್ನೂ ಅನೇಕ ಕೆಲಸಗಳು ವಿದ್ಯಾ ಇಲಾಖೆಯಲ್ಲಿ ಆಗಿವೆ. Triple benefit scheme ಅರ್ಥವಿಲ್ಲದ್ದು, free books ಕೊಡುವುದು ಅರ್ಥವಿಲ್ಲದ್ದು, ಎನ್ನುವವರೂ ಇರಬಹುದು. ಮಾನ್ಯ ಆರ್ಥಿಕ ಮಂತ್ರಿಗಳು ಆ ವಿಚಾರ ಸ್ಪಷ್ಟವಾಗಿ ಹೇಳುವವರಿದ್ದಾರೆ. Director of Public Instruction, Joint Director, Director of Technical Education ಇವರ ವಿಚಾರದಲ್ಲಿ ಏನೋ ಒಂದು ಬಗೆಯಲ್ಲಿ ಮಾಡಲಾಗಿದೆ ಎನ್ನುವ ಭಾವನೆ ಬಂದುದರಿಂದ ಸದಸ್ಯರ ಅನುಮಾನಗಳನ್ನು ಪರಿಹರಿಸಲು ನಾನು ಕೆಲವು ಮಾತುಗಳನ್ನಾಡಬೇಕಾಯಿತು.

† Sri SANJEEVANATH AIKALA (Suratkal).—Mr. Speaker, Sir, in presenting the Budget the Finance Minister said that he was presenting the Budget without any fresh taxation proposals. Members of the Ruling Party, having been tutored so, rose one after the other to support the budget proposals. Sir, the taxable sources of this State have reached a saturated point, and there are no more sources left for fresh taxation. When that is so, how can the Finance Minister come forth with any fresh taxation proposals ? Apart from this, the Defence and the Development budget presented by the Central Finance Minister has left no room for his counter-parts in the States to propose any fresh taxation in their budgets. Enough commodities and enough sources have been taxed according to the proposals of the Central Finance Minister and hardly nothing is left for the State to even think of fresh taxation.

Sir, when I heard the speechs of Member of the ruling party, their one uniform song of the day was to support the proposals made by the Finance Minister and to criticise Members on this side.

Sri B. D. JATTI.—You can make suggestions which are new.

Sri SANJEEVANATH AIKALA.—I will do it. Sir, the Finance Minister presented a rosy picture, a picture of plenty and a picture of prosperity. But I ask the Finance Minister as to what has been done in the production of foodgrains. Hon'ble Member Mr. S. M. Krishna gave a very clear picture regarding production of food in the State. The Finance Minister says that in the ensuing years there will be enough and more food to be distributed among the people. But what are the facts? I ask the Hon'ble Finance Minister whether it has ever come to his notice or whether he has ever seen the scene near the Municipal dust bins in cities like Bangalore, Mangalore or Mysore? Sir, beggars and dogs gather there to take the left-overs and they fight with each other to grab the food thrown into the dust bins. Such are the scenes I have seen so many times with my own eyes in Bangalore, Mangalore and Mysore. Still, the Finance Minister says that there is enough food and Government have provided enough measures to have enough food for one and all. But the scenes which we see here today are quite different. So also he promises longer roads, better roads, free education to every child and all that. But what do we see everyday? I have seen young urchins working in the construction of roads and bridges for their livelihood. They are children, who are left with no facility for going to schools to get their education. There are thousands of such urchins, all over our State.

[MR. DEPUTY SPEAKER IN THE CHAIR.]

There are thousands of such urchins. I have seen any number of children in the course of my travels, without any facilities for schooling. There are hundreds of villages in Mysore State where the people have to go nearly a mile or 1½ miles for the purpose of getting drinking water. I have seen men and women and children round in the major cities who are ill-clothed and ill-fed. In many villages there are women who cannot take bath because they have no other clothes to wear after the bath. This is the scene which our villages in Mysore State present and yet the Finance Minister says that no such conditions are prevailing in our State. If you care to go to the villages far and near, you can see all the scenes *ad nauseam*.

Sri K. S. SURYANARAYANA RAO (Mysore City).—Can you give statistics as to the vastness of the problem?

Sri SANJEEVANATH AIKALA.—If you have only eyes to see and ears to hear, you meet with such scenes all over the State. Perhaps you want to shut your eyes or plug your ears. Just take the trouble of going to the street corners and mingle with the masses. Statistics you and I can manipulate. There are officers for you to manipulate statistics and you can give a rosy picture of the statistics. I am not concerned with statistics. I am a practical man.

Sri K. S. SURYANARAYANA RAO.—Give your own statistics.

Sri SANJEEVANATH AIKALA.—I am not a statistician; but I put the things as I see and as I hear and I make bold to say all these things. This is the picture which the Honourable Minister wants us to believe, but things are quite different. There are several matters to which I wanted to make reference in the budget speech, but with the short time that I am given, I only come to very salient features. The members of the ruling party feel very touchy and hurt when I say all these things. This Government is just like a woman in labour pains. What can the woman do when the labour pains set in ?

Sri B. D. JATTI.—How has the member realised about it ?

Sri SANJEEVANATH A KALA.—We are a part and parcel of the society. If a man has a sense of understanding and kindness, towards the womenfolk, certainly he will feel it. Unmarried people cannot feel pity for the condition of the womenfolk,

Sri J. H. SHAMSUDDIN (Deputy Minister for Electricity).—Is it a personal experience or imagination ?

Sri SANJEEVANATH AIKALA.—The Hon'ble Member who is having a large family knows about it. I have got a little experience about it. When the labour pains set in, the woman weeps. She screems. She cries and she reaches a stage that she will scold her husband; but when the child is born and the wisdom dawns upon her, naturally she feels elated. She praises her husband for giving such a nice child. When the members of the Opposition express their honest opinions, Government feel hurt. When wisdom dawns upon them sooner or later, certainly they must feel grateful to the members on this side for giving them good adivce. Thus They are just like women in labour pains.

Mr. DEPUTY SPEAKER.—Where is pain and who will get a child !

Sri SANJEEVANATH AIKALA.—When wisdom dawns upon them, they must feel grateful to us.

I do not want to make any particular reference here, but one important point I want to touch upon, and that is, about an all weather port at Mangalore. It was proposed originally that the Mangalore port was to be located at the mouth of the River Netravathi ; several surveys have been conducted and it was almost decided that the harbour should be located at the mouth of the river Netravathi just two miles south of Mangalore. But of late the entire scheme was re-surveyed. Now it is proposed that this all weather port should be located at the north of Mangalore, nearly 5 miles north of Mangalore at the mouth of the river Netravathi. I am not against this proposal, because after all, it depends upon the technical survey and the facilities available for the development of this port. But what concerns you and every one of us is the rehabilitation of those who are to be displaced from there. If the original scheme were to be accepted, there are hardly very few people who are to be displaced ; but now at least 3,000 families are required to be displaced ; their houses are to be dismantled, their lands have to be taken away. I want to emphasise that when a large number of people are to be displaced, priority should be given to the question of rehabilitation. Government say 'When we are giving a good amount of

(SRI SANJEEVANATH AIKALA)

compensation, why should you get yourselves disappointed ?.' The question is about rehabilitation. Where are these people to go ? The coastal areas of South Kanara District are so thickly populated, that they find hardly places for those people to get themselves rehabilitated. It should be the primary duty of Government to see that those people are rehabilitated well and along with it, proper compensation is paid to them.

I now wish to say a word or two about prohibition. I think Government would find its Waterloo in the prohibition policy. If Napo eon found Waterloo in the battle field, this Government will find Waterloo in the field of prohibition. Prohibition has not only sapped the energies of the people but it has lowered their morale. A time will come when no man will be considered honest and a gentleman unless he takes to drinking. That is the position prevailing in my own District and I think it is so in other Districts as well. Unless this Government realise this bad policy and the way in which it is administered, there is no way of escape for them.

I urge upon the Government, in all sincerity at my command, that in the interest of the State as well as the people, they should change their policy, sooner than later. Members made a reference to the remarks of the Chief Minister at Bombay and other places that he would like to go into the effects of Prohibition. Now because of pressure from the Centre, he appears to have recoiled. After all, they are 'His Master's Voice' and they have to listen to their masters.

†ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಸಭಾಪತಿಗಳೇ, ಕಳೆದ ನಾಲ್ಕು ದಿವಸಗಳಿಂದ ಆಯವ್ಯಯ ಪಟ್ಟಿಯ ಮೇಲೆ ಚರ್ಚೆ ನಡೆದಿದೆ. ಇಂದು ಕೊನೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಸಭಾಪತಿಯವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈ ತುರ್ತ ಪರಿಸ್ಥಿತಿಯಲ್ಲಿ ಈ ವರ್ಷ ಹೊಸ ತೆರಿಗೆ ಹಾಕಿಲ್ಲ. ತೆರಿಗೆ ರಹಿತವಾದ ಬಜೆಟ್ ಸಭೆಯ ಮುಂದೆ ಮಂಡಿಸಿದ್ದಾರೆ. ಒಟ್ಟು ಆದಾಯ 99.12 ಕೋಟಿ, ಖರ್ಚು 99.52 ಕೋಟಿ ಅಂದರೆ 40 ಲಕ್ಷ ರೂಪಾಯಿ ಕೊರತೆ ಬಜೆಟ್ಟಾಗಿದೆ. ಸರಕಾರಿ ನೌಕರರಿಗೆ ಹೆಚ್ಚಿನ ಭತ್ಯ ಕೊಡುವುದನ್ನು ಸೂಚಿಸಿದ್ದಾರೆ. ಈ ಅಲ್ಪ ತುಟ್ಟಿ ಭತ್ಯ ಕೊಡುವುದರಿಂದ ನೌಕರರ ಜೀವನಮಟ್ಟದಲ್ಲಿ ಹೆಚ್ಚು ಕಡಿಮೆಯಾಗುವುದು ಸಾಧ್ಯವಿಲ್ಲ. ಈ ಕೊರತೆ ಮುಂಗಡ ಪತ್ರವಾಗಿದ್ದರೂ ಅನೇಕ ಕಾಮಗಾರಿಗಳನ್ನು ಪ್ರಾರಂಭಿಸಿರುವುದು ನಿಜವಾಗಿಯೂ ಸಂತೋಷಕರ. ಮಾರಾಟ ತೆರಿಗೆಯ ಮೂಲಕ ಹೆಚ್ಚಿನ ಆದಾಯ ಬರುವ ಹಾಗೆ ಯೋಜಿಸಲಾಗಿದೆ. ಭೋಗ ವಸ್ತುಗಳ ಮೇಲೆ ಹೆಚ್ಚಿನ ಮಾರಾಟ ತೆರಿಗೆ ಹಾಕಿರುವುದು ಗಮನಾರ್ಹವಾದ ವಿಷಯ. ಮೂರನೇ ಯೋಜನೆಗಾಗಿ 250 ಕೋಟಿಯಲ್ಲಿ 110 ಕೋಟಿ ರೂ. ರಾಜ್ಯ ಸರಕಾರ ಒದಗಿಸಬೇಕಾಗಿದೆ. ಇದನ್ನು ಯಾವ ರೀತಿ ಹೊಂದಾಣಿಕೆ ಮಾಡುತ್ತಾರೆ ಎನ್ನುವುದಕ್ಕೆ ಅಂಕಿ ಅಂಶಗಳನ್ನು ಒದಗಿಸಿದ್ದರೆ ಟೀಕೆಗೆ ಗುರಿಯಾಗುತ್ತಿರಲಿಲ್ಲ ಎಂದು ನನ್ನ ತಿಳುವಳಿಕೆ. ತೆರಿಗೆ ಬಾಕಿ ವಸೂಲ್ಮಾಡಲು ಪ್ರಭಾವೀ ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ನೀರಾವರಿ ಯೋಜನೆಯಾದ ಮಲಪ್ರಭಾ ಯೋಜನೆಗೆ ಹಣ ಒದಗಿಸಿರುವುದು ಸಂತೋಷ. ಆದರೆ ಈ ಯೋಜನೆಯಲ್ಲಿ ರಸ್ತೆ ರಚನೆಮಾಡುವುದು, ಅಧಿಕಾರಿಗಳಿಗೆ ಮನೆ ಕಟ್ಟುವುದು ಮುಂತಾದ ಕೆಲಸ ಕಾರ್ಯಗಳಿಗೆ ಹೆಚ್ಚು ಖರ್ಚುಮಾಡದೆ ಮೊದಲು ಕಾಲುವೆ ರಚನೆ, ಅಣೆಕಟ್ಟು ಕಟ್ಟುವ ಕೆಲಸ ಕೈಗೊಂಡಿದ್ದಾರೆಯೇ ಎನ್ನುವುದು ತಿಳಿಯಲಿಲ್ಲ. ಇದನ್ನು ಸ್ಪಷ್ಟಪಡಿಸಬೇಕು.

ನಮ್ಮ ಉತ್ತರ ಕರ್ನಾಟಕದಲ್ಲಿ ಮೊದಲು ಪ್ರಾರಂಭವಾಡಿದ ಘಟಪ್ರಭಾ ಯೋಜನೆಯ ಕೆಲಸ ಇನ್ನೂ ಪೂರ್ತಿಯಾಗಿಲ್ಲ. ಈ ಯೋಜನೆ ಕೆಲಸವನ್ನು ಆದಷ್ಟು ತೀವ್ರ ಪೂರೈಸಬೇಕು. ಸಣ್ಣ ನೀರಾವರಿ ಯೋಜನೆಗೆ ಬೇಕಾದಷ್ಟು ಹಣ ಒದಗಿಸಲಾಗಿದೆ. ಮಳೆ ಹೆಚ್ಚಾದಾಗ ಮತ್ತು ಬರಗಾಲ ಪ್ರದೇಶವಾಗಿರುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದು ಅಗತ್ಯ. ಈ ಬರಗಾಲ ಪ್ರದೇಶಕ್ಕೆ ಹೆಚ್ಚು

ಪ್ರಾಶಸ್ತ್ಯ ಕೊಟ್ಟು ನೀರಾವರಿ ಕೆರೆಗಳನ್ನು ಆದಷ್ಟು ಹೆಚ್ಚಾಗಿ ಕಟ್ಟಿಸಬೇಕು. ನೀರಾವರಿ ಬಾವಿಗಳಿಗೆ ಪಂಪು ಸೆಟ್ಟುಗಳಿಗೆ ಬೇಕಾದಷ್ಟು ಹಣ ಕೊಡುತ್ತಾ ಇದ್ದೀರಿ. ಆದರೆ ಈ ಹಣ ಸಕಾಲದಲ್ಲಿ ದೊರೆಯುವದಿಲ್ಲ. ಬಾವಿ ತೆಗೆಯುವುದಕ್ಕೆ ಪ್ರಾರಂಭಿಸಿ ಆರು ತಿಂಗಳಾದರೂ ದುಡ್ಡು ಸಿಕ್ಕುವದಿಲ್ಲ. ಇದರಿಂದ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಆದಷ್ಟು ತೀವ್ರ ಹಣ ಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ.

ಪಂಪುಸೆಟ್ಟು ಮತ್ತು ಡೀಜೆಲ್ ಎಂಜಿನು ಒಂದು ತಾಲ್ಲೂಕಿಗೆ 100 ಎಂಜಿನ್ನು ಬೇಕಾಗಿದ್ದರೂ ರೈತರಿಗೆ 3–4 ಮಾತ್ರ ಸಿಕ್ಕುತ್ತವೆ. ಇದು ಟೀಕೆಗೆ ಗುರಿಯಾಗಿದೆ. ಒಂದು ತಾಲ್ಲೂಕಿಗೆ 100–150 ಎಂಜಿನ್ನುಗಳು ಅಥವಾ ರೈತರಿಗೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿದರೆ ಟೀಕೆ ಮಾಡುವುದು ತಪ್ಪಬಹುದು.

ಇನ್ನು ಲಿಫ್ಟು ಇರಿಗೇಷನ್ ವಿಚಾರದಲ್ಲಿ ಒಂದು ಸೂಚನೆ ಮಾಡಲು ಬಯಸುತ್ತೇನೆ. ಲಿಫ್ಟು ಇರಿಗೇಷನ್ ವ್ಯವಸ್ಥೆ ಮಾಡುವುದನ್ನು ಸರಕಾರದವರು ತಾವೇ ನಿರ್ವಹಿಸಬೇಕು. ಅಂದರೆ ಈ ಸೌಲಭ್ಯ ಒದಗಿಸುದುದು ಯಶಸ್ವಿಯಾಗುತ್ತದೆ.

ರೋಗದಿಂದ ಬೆಳೆಗಳ ರಕ್ಷಣೆ ಮಾಡುವುದಕ್ಕೆ, ಅದಕ್ಕೆ ಉಪಾಯ ಕಂಡುಹಿಡಿಯುವುದಕ್ಕೆ ರಿಸರ್ಚ್ ಸೆಂಟರ್ಸ್ ತೆಗೆಯಬೇಕು. ವಿಜಾಪೂರದಲ್ಲಿ ಒಂದು ರಿಸರ್ಚ್ ಸೆಂಟರ್, ಬೆಳಗಾಂವ, ಧಾರವಾಡ ಜಿಲ್ಲೆಗಳಲ್ಲಿ ಸಬ್ ಸೆಂಟರ್ಸ ಯಾವಾಗ ಪ್ರಾರಂಭಿಸುತ್ತಾರೆ ತಿಳಿಸಬೇಕು. ಹತ್ತಿ, ಜೋಳ, ಸೆಜ್ಜೆ ಇವುಗಳಿಗೆ ಬರುವ ರೋಗ ನಿವಾರಣೆಗಾಗಿ ತಾಲ್ಲೂಕ ಮಟ್ಟದಲ್ಲಿ ಔಷಧಿ ಸಿಕ್ಕುವದಿಲ್ಲ, ತಾಲ್ಲೂಕ ಮಟ್ಟದಲ್ಲಿ ಔಷಧಿ ಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕು. ಅಂದರೆ ರೈತರಿಗೆ ಈ ಔಷಧಿಯಿಂದ ಉಪಯೋಗವಾಗುತ್ತದೆ.

ಈ ವರ್ಷ ಶಿಕ್ಷಣದ ಬಾಬಿಗೆ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರಲಾಗಿದೆ. ಆದರೆ ಕಡ್ಡಾಯ ಶಿಕ್ಷಣ ಪದ್ಧತಿಯಲ್ಲಿ ಪ್ರಾಥಮಿಕ ಶಾಲೆಗಳು ಎಷ್ಟು, ಅಲ್ಲಿಗೆ ಬರುವ ಮಕ್ಕಳ ಸಂಖ್ಯೆ ಎಷ್ಟು, ಯಾವ ರೀತಿ ಶಿಕ್ಷಣ ಕೊಡುತ್ತಿದ್ದಾರೆ ಎಂಬುದು ಶೋಚನೀಯವಾಗಿದೆ. ಹಾಜರಿಯಲ್ಲಿ ಕಾಣಿಸಿದ ಮಕ್ಕಳ ಸಂಖ್ಯೆಯಷ್ಟು ಮಕ್ಕಳು ಸಾಲೆಯಲ್ಲಿ ಇರುವದಿಲ್ಲ.

10-30 A. M.

ಮಕ್ಕಳು ಶಾಲೆಗೆ ಬರುವಂತೆ ನಾವು ಏನಾದರೂ ಆಕರ್ಷಣೆಯನ್ನು ಅಲ್ಲಿ ಇಡಬೇಕಾಗುತ್ತದೆ. ಮತ್ತು ಬಾಲಕರನ್ನು ಶಾಲೆಗೆ ಕಳುಹಿಸುವಂತೆ ಮಾಡಬೇಕಾದರೆ, ಅವರ ತಂದೆ ತಾಯಿಗಳ ಮೇಲೆ ಕಳುಹಿಸದಿದ್ದರೆ, ಉಗ್ರ ಕ್ರಮವನ್ನು ತಗೆದುಕೊಳ್ಳಬೇಕು, ಆಗ ಮಕ್ಕಳನ್ನು ಕಳಹಿಸುತ್ತಾರೆ. ಈಗ ಇಂತಿಷ್ಟು ಮಕ್ಕಳನ್ನು ಕಳುಹಿಸುತ್ತಿದ್ದಾರೆಂಬ ಬಗ್ಗೆ ಅಂಕಿ ಅಂಶಗಳೇನಿವೆ ಅವುಗಳನ್ನು ನಂಬಿಕೊಳ್ಳಲಾಗುವುದಿಲ್ಲ. ಒಂದು ಸುಳ್ಳಿನ ಕಂತೆ. ನಮ್ಮ ದೇಶದಲ್ಲಿ ಎಲ್ಲರೂ ಬುದ್ಧಿವಂತರಾಗಬೇಕಾದರೆ, ಶಿಕ್ಷಣತ್ವದ ಆಂಕಿ ಅಂಶಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು, ಇಲ್ಲದೆ ಹೋದರೆ ಪ್ರಜಾಪ್ರಭುತ್ವಕ್ಕೆ ಒಂದು ಕೊಡ್ಲಿ ಪೆಟ್ಟು ಬಿದ್ದೀತು. ಅಂಕಿಅಂಶ ಸಂಗ್ರಹಿಸುವುದಕ್ಕೆ ಪ್ರಭಾವಯುತ ಕ್ರಮಗಳನ್ನು ಕೈಗೊಳ್ಳಬೇಕು.

ಶಿಕ್ಷಕರ ಪ್ರಮುಖ ಕುಂದುಕೊರತೆಗಳನ್ನು ಮನಗಂಡು ಅವರಿಗೆ ಸೌಲಭ್ಯಗಳನ್ನು ಒದಗಿಸಿರುವುದಕ್ಕೆ ತಮ್ಮನ್ನು ಎಷ್ಟು ಹೊಗಳಿದರೂ ಸಾಲದು ; ಎಷ್ಟು ಪ್ರಶಂಸೆಮಾಡಿದರೂ ಕಡಿಮೆ.

ಮಂತ್ರಿಮಂಡಲದ ಗಾತ್ರವನ್ನು ಕಡಿಮೆ ಮಾಡಬೇಕೆಂದು ಪ್ರಾಮುಖ್ಯವಾಗಿ ಎಲ್ಲ ವಿರೋಧ ಪಕ್ಷದ ಎಲ್ಲ ಸದಸ್ಯರೂ ಹೇಳಿದರು. ಈ ಬಗ್ಗೆ ನಾಯಕರು ಎರಡು–ಮೂರು ಸಲ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಕಡಿಮೆ ಮಾಡುವುದಕ್ಕೆ ಬಹಳ ತೊಂದರೆಗಳಿವೆ, ಕಡಿಮೆ ಮಾಡಿದರೆ ಆಡಳಿತ ಸುಗಮವಾಗಿ ಸಾಗುವುದಿಲ್ಲ. ಎಲ್ಲ ಶಾಖೆಗಳಲ್ಲಿಯೂ ಸುವ್ಯವಸ್ಥಿತವಾದ ರಾಜ್ಯಭಾರ ನಡೆಸಲು ಇಷ್ಟು ಜನ ಮಂತ್ರಿಗಳು ಬೇಕು. ನಮ್ಮ ವಿರೋಧ ಪಕ್ಷದ ಸದಸ್ಯರಿಗೆ ಮಿತವ್ಯಯ ಮಾಡಿ, ಹಣ ಉಳಿಸುವುದೊಂದೇ ತಿಳಿದುಕೊಂಡಿದ್ದಾರೆ. ಹೀಗೆ ಮಾಡಿದರೆ ದಕ್ಷತೆ ಕಡಿಮೆಯಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಈ 15 ವರ್ಷದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರದವರಾಗಲಿ, ಅಥವ ನಾವುಗಳಾಗಲಿ ನವ ಭಾರತವನ್ನು ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿಲ್ಲವೆಂದು, ಮಂತ್ರೊಂದು ವಿಷಯ ಹೇಳಿದರು. ಈಗ ಚೀಣಾ ದುರಾಕ್ರಮಣದಿಂದ ಮಾಡಬೇಕಾದ್ದು ಒಂದೇ ರಾತ್ರಿಯಲ್ಲಿ ಆಗಿದೆ. ಈಗ ದೇಶದಲ್ಲಿ ಐಕ್ಯತೆ ಮತ್ತು ದೇಶಪ್ರೇಮ ಉಕ್ಕಿಬರುತ್ತಿರುವುದನ್ನು ನೋಡುತ್ತಾ ಇದ್ದೇವೆ; ಪ್ರತಿಯೊಬ್ಬರಲ್ಲೂ ದೇಶಪ್ರೇಮ ತುಂಬಿದೆ. ಅದನ್ನು ಸಂರಕ್ಷಣೆ ಮಾಡಿಕೊಳ್ಳಬೇಕಾದ್ದು ಈಗಿನ ಅತಿ ಮುಖ್ಯ ಕರ್ತವ್ಯವೆಂದು ವಿರೋಧ ಪಕ್ಷದ ಮಾನ್ಯ ಸದಸ್ಯರಲ್ಲಿ ಹೇಳುತ್ತಿದ್ದೇನೆ. ಇಂಥ ತುರ್ತು

(ಶ್ರೀ ಆರ್. ಎಸ್. ಪಾಟೀಲ್)

ಸಮಯದಲ್ಲಿ ಪೋಲಿಗಳು ಕೊಳ್ಳೆ, ಹೊಡೆಯುವುದು, ಕೊಲೆ ಮಾಡುವುದು ಮುಂತಾದ ಕಾರ್ಯಗಳಲ್ಲಿ ತೊಡಗದಂತೆ ನೋಡಿಕೊಂಡು, ದೇಶವನ್ನು ರಕ್ಷಣೆ ಮಾಡಲು ಮಂತ್ರಿಗಳು ರಾತ್ರಿ ಹಗಲು ಪ್ರವಾಸ ಮಾಡಬೇಕಾಗುತ್ತದೆನ್ನುವುದನ್ನು ಅವರು ತಿಳಿದುಕೊಳ್ಳಲಿ.

ಇಷ್ಟು ಮಾತನಾಡಲು ಐದು ನಿಮಿಷ ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B R. SUNTHANKAR (Belgaum City).—Mr. Speaker, Sir, I thank you for giving me this opportunity to express my views on the Budget. This Budget presented by the Hon'ble Finance Minister to this House is formulated under the emergency situation, but if we closely review the Budget, unfortunately, I have to say that this Budget does not reflect any emergency situation.

[MR. SPEAKER in the Chair].

This Budget is like a Budget of any other year. It conforms to the usual pattern of any other year. There is no speciality in the Budget by which we can call it an 'Emergency Budget'. The Union Finance Minister, Hon'ble Sri Morarji Desai, in his Budget speech, has called upon all the State Governments to impose a tight financial discipline and to keep their expenditure within means. But, this Budget do not bear any mark of such a tight discipline that the situation demands. The Hon'ble Finance Minister in his speech has assured more than once that he will try to bring about economy in the expenditure. But, how far he will succeed is rather doubtful. Sir, I would like to suggest to him to cut the expenditure atleast by 5 Crores. The expenditure in 1961-62 was 95 Crores, the revised estimates of expenditure in 1962-63 is 97 Crores and this Budget shows an expenditure of 98 Crores. I would suggest to the Finance Minister to bring down this expenditure to at least 95 Crores. He should try his best to work in this direction.

I fully associate my feelings with the views expressed by my Hon'ble friend Mr. Vidyadhar Guruji, in respect of the emergency. Sir, we have failed in this emergency situation—we have failed on the ideological front as he has pointed out. The danger of Chinese aggression is still there. The Colombo Plan has fizzled out and we do not know when the Chinese will attack again. Most probably, they may attack our borders after a month or two. So, the danger is still there, and it is the duty of us all' the Government as well as the public, to build a strong second line of defence. In this respect we are not getting up to the mark. We see in the budget that some provision has been made for Civil Defence. Similarly, for Homeguards' Organisation an amount of Rs. 6 lakhs and odd has been allotted, but the administrative machinery is moving very slow. The Homeguards' Organisation has not come into existence yet. Still the Homeguards' Organisation has to be organised, Commandants are yet to be appointed and the Home Gaurds are yet to be enlisted. The machinery is going on very slow. That shows that the Government is not very serious in this respect; perhaps, Government does not realise

the gravity of the situation. As for Rifle-shooting and ammunition required, only an amount of Rs. 4,000 is provided in the Budget. I do not know, with this meagre amount how many people are going to be trained in Rifle-shooting. This Rifle-shooting is a very important item and Government should pay more attention to it.

Then, about the welfare of the families of the Jawans : our Jawans are fighting on the Himalayan border; large number of them have laid their lives defending the country. It is the duty of the Government to look after well the families of the Jawans. I do not know what provisions are made by the Government to look after the families of the Jawans to give all the necessary facilities in the matter of education of their children and so on. I do not know what the Government have done. Whether the Goverument have made any provision in this respect— measures or steps the Government is taking to look after the families of the Jawans so that they may fight and defend the border care-free without any worries regarding their families?

A perusal of the Budget does not assures us that strict economy will be observed while spending. I may give here some instances. As regards the expenditure on Ministers as a matter of fact, the expenditure on Ministers that is provided in the Budget has actually increased. In 1961-62, the actual expenditure was 6.82 lakhs, according revised figures of 1962-63 the expenditure is 6.76 lakhs and the amount provided in the Budget is 7.40 lakhs. So, there is an increase in this expenditure.

Similarly Sir, under the head of Civil Secretariat, expenditure in 1961-62 was 65 lakhs, according to revised budget for 1962-63, it is 67 lakhs and the present budget provision has gone up to 68 lakhs. Instead of cutting down expenditure, the budget shows increase in the expenditure.

And there is also a proposal to appoint two more Parliamentary Secretaries. I do not understand why Government feels it necessary to appoint two more Parliamentary Secretaries when some of the Ministers have not got sufficient work. The Hon'ble Finance Minister would see that the expenditure is cut. Charity begins at home. The Ministers should lay down an example of cutting down and economising their expenditure so that it will have a good and beneficial effect on the administration as a whole.

Sir, the Resources and Economy Committee had made several suggestions to cut down expenditure of Ministers' establishments, under horticultural gardens and furnishing of Ministers' residences. The A.G.R. Committee has made a number of good suggestions and I want the Government to follow these suggestions and to give effect to them.

Similarly Sir, there is good deal of waste and leakage in administration. I may quote some examples. Very recently in the Bangalore Division of the P.W.D., it was found that 12,000 cement bags were missing. Similarly, 160 tons of steel were also missing. Between the years 1960 to 1962, between these two years, there was no stock checking or no stock verification and in November 1962 when stock was verified, this huge leakage was found out.

(SRI B. R. SUNTHANKR)

Similarly, I may quote an example how Government money is wasted. That is in regard to housing colonies. There is a Housing colony for industrial workers in Gulbarga consisting of 300 houses. The contract was given to a congress favourite. After the first rainy season, 30 houses of this colony collapsed to the ground. Doors of 100 houses fell apart and floors of almost all houses have cracked and windows and doors cannot shut. Similarly Sir, there is another housing colony in Kolar District at Narsapur—Adikarnatak Colony. After the rains, the walls of a large number of houses collapsed. In 1959, the whole colony had to be demolished in order to have a new construction and a new colony. Sir, these wastages and leakages must be stopped.

Sri B. RACHIAH.—If the Hon'ble Member yields, he has reffered to the Housing Colony in Kolar District, I want to know whether the Hon'ble Member has looked at the colony at any time.

Sri B. R. SUNTHANKAR.—There is no question of visiting the colony. That is the observation contained in the Audit report.

Sri B. RACHIAH.—I have visited the colony personally. It is a very good colony.

Sri B. R. SUNTHANKAR.—Let the Hon'ble Minister look into the Audit report.

Sri B. RACHIAH.—I would invite the Hon'ble Member to go and visit the colony and then offer his remarks.

Mr. SPEAKER.—The Hon'ble Minister will take you in his car. You proceed to the next point.

Sri B. R. SUNTHANKAR.—Then Sir, about Khadi subsidy. Sir, Khadi subsidy must be stopped. For the last so many years, Government has been subsidising Khadi. It must be stopped. Khadi has never been economical. Besides, Khadi is a luxury article. Khadi is not meant for the poor. Khadi is a sort of livery of the Congress and the Ruling party. It is the responsibility of the Ruling Party to bear the burden of Khadi if at all any burden has to be borne. Giving rebate and subsidising Khadi means that the Government is using the tax-payer's money to make a gift of khadi to those who wear it. So, it must be stopped. Sir, time has come when subsidy to khadi must be stopped and that much of expenditure to Government exchequer must be saved.

My Hon. friend Sri Gopala Gowda here is suggesting that the Khadi Board should be wound up once and for all.

Then Sir, about basic education. Experience of past 10-12 years has shown that Basic education has failed. It is not only that I say this, but the very founder of basic education our Hon'ble Vice-President Dr. Zakir Hussain has declared that basic education has become 'fraudulent'. These are his words. So, time has come when we should scrap this basic education.

Then Sir, this Government has lost a golden opportunity of scrapping prohibition. This emergency had given a golden opportunity to

Government to scrap prohibition. This Government has not utilised that opportunity.

Sir, the difficulty with this Congress Party is that they will never become realistic. They try to adhere to their fads and these fads are costing the public exchequer a lot of unnecessary expenditure.

Then sir, about production. In this emergency, there is great need to step up production. But in this direction, the performance of this Government is not encouraging at all. Sir, it is stated that the targets of the second plan have been achieved. That is not a fact, sir. There has been a short fall in expenditure to the extent of 7 crores during the second plan and the expenditure on planning has been very irregular. If we look at the progress of expenditure during the second plan, a sum of Rs. 140 crores has been spent. How was it spent? You see in the first year the expenditure is 16 crores; in the second year, 21 crores; in the third year, expenditure was 25 crores; in the fourth year, the expenditure was 30 crores and in the fifth year, expenditure was 48 crores. This has been very irregular phasing of expenditure. In the fifth year, there has been a rush of programmes and rush of expenditure. In order not to allow the grants to lapse, there has been rush in the last year particularly in the last quarter. So, that means there has been irregular phasing and planning. There is no proper phasing. There is no 'perspective planning' as remarked by the A.G.R. Committee and similarly, there is no scheme of priorities. So that the programmes are taken up according to the pulls and pushes and political pressures and there is no planning ahead as rightly said by Hon'ble friend Shri Suryanarayana Rao. That has been the defect in the execution of the Plan.

†ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೆಬಿಹಾಳ್).—ಮಾನ್ಯ ಸಭಾಪತಿಗಳೇ, ಹತ್ತೊಂಭತ್ತು ನೂರ ಅರವತ್ತುಮೂರು-ಅರವತ್ತನಾಲ್ಕನೇ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತ ಕೆಲವೊಂದು ಸಲಹೆಗಳೇನಿವೆ ನನ್ನ ಅನುಭವದ ಪ್ರಕಾರ ಅವುಗಳನ್ನು ಮಾನ್ಯ ಸಚಿವರುಗಳಿಗೆ ತಿಳಿಸಬೇಕಾಗಿದೆ. ನಾನು ಈ ಹಣಕಾಸಿನ ಆಯವ್ಯಯವನ್ನು ನೋಡಿದಾಗ ಏನೋ ಒಂದು ಇದರಲ್ಲಿ ಕ್ರಾಂತಿಕಾರಕ ವಿಚಾರ ಹೊಳೆಯುತ್ತಿದ್ದಂತೆ ನನಗೆ ಕಂಡುಬಂದಿತು.

ಸರ್ಕಾರದವರೇನು ಈ ಹಿಂದೆ 1962-63 ರಲ್ಲಿ ನಮ್ಮ ರೈತರಿಗೆ ಸೌಲತ್ತುಗಳನ್ನು ಕೊಡುತ್ತಿದ್ದೇವೆಂತ ಹೇಳುತ್ತಿದ್ದರೋ ಅದು ನಮ್ಮ ದೇಶವನ್ನು ಹೇಗೆ ಒಂದು ಉತ್ತಮ ರಾಜ್ಯವನ್ನಾಗಿ ಮಾಡಬೇಕು, ಈ ರಾಜ್ಯದಲ್ಲಿರತಕ್ಕ ಹಿಡುವಳಿದಾರರ, ಒಕ್ಕಲುತನದ ಈ ರಾಜ್ಯದಲ್ಲಿ ಅವರ ಜೀವನ ಮಟ್ಟವನ್ನು ಹೇಗೆ ಏರಿಸಬೇಕು ಎಂಬುದನ್ನ ನಮ್ಮ ಸರ್ಕಾರದವರು ಮುಖ್ಯವಾಗಿ ಗಮನಕ್ಕೆ ತೆಗೆದುಕೊಂಡು ನಮ್ಮ ದೇಶದಲ್ಲಿ ಒಕ್ಕಲುತನದ ಉದ್ಯೋಗ ಬೆಳೆಯಲು ಸಾಕಷ್ಟು ಲಕ್ಷ್ಯ ಕೊಡಲಿಕ್ಕೆ ಹತ್ತಿದ್ದಾರೆ, ಇದನ್ನು ಅವರು ಮಾಡಲೇಬೇಕು ಎಂತ ನಾವೂ ಕೇಳುತ್ತಿದ್ದೇವೆ, ಅವರೂ ಸಹ ಸಾಕಷ್ಟು ಲಕ್ಷ್ಯ ಕೊಟ್ಟು ಅನುಕೂಲ ಮಾಡುತ್ತಿದ್ದಾರೆ. ಆದರೆ ಈ ವರ್ಷ ಈ ಹಾದಿಯಲ್ಲಿ ನಮ್ಮ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಅನೇಕ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಪ್ರಯತ್ನಗಳನ್ನು ಇಟ್ಟುಕೊಂಡಿದ್ದಾರೆ. ಹೀಗಿರುವಾಗ ಈಒಕ್ಕಲುತನದ ವಿಚಾರದಲ್ಲಿ 1963-64ನೇ ಸಾಲಿನಲ್ಲಿ ಸಾಕಷ್ಟು ಸರ್ಕಾರ ಗಮನ ಕೊಟ್ಟಿಲ್ಲ ಅಂತ ಕೆಲವರೇನು ಹೇಳಿದ್ದಾರೆ ಅದನ್ನು ನಾನು ಒಪ್ಪಲಾರೆ. ಅವರು ಹಾಗೆ ಹೇಳಲು ಕಾರಣಗಳಿಲ್ಲ. ಈ ದಿವಸ ನಮ್ಮ ಸರ್ಕಾರದವರು ರೈತನ ಅಭಿವೃದ್ಧಿಗಾಗಿ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ ; ಹೀಗೆ ನೀರಾವರಿ ಸೌಕರ ಕಲ್ಪಿಸುವುದರ ಜೊತೆಗೆ ತಗಾವಿ ಸಾಲಗಳನ್ನು ಕೊಡುತ್ತಿದ್ದಾರೆ, ಸೊಸೈಟಿಗಳ ಮೂಲಕ ಗೊಬ್ಬರವನ್ನು ಒದಗಿಸಿ ಸಹಾಯ ಮಾಡುತ್ತಿದ್ದಾರೆ. ಪಂಪ್ ಸೆಟ್ಟುಗಳನ್ನು ಕೊಂಡುಕೊಳ್ಳುವ ವಿಚಾರದಲ್ಲೂ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಇಷ್ಟೇಅಲ್ಲದೆ ರೈತರಿಗೆ ಈ ಭಾಗದಲ್ಲಿ ಇನ್ನೂ ಹೆಚ್ಚಿನ ನೀರನ್ನು ಪೂರೈಕೆ ಮಾಡಲು ಇನ್ನೂ ಅನೇಕ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಲಿಕ್ಕೆ ಹತ್ತಿದ್ದಾರೆಂಬು

(ಶ್ರೀ ಎಸ್. ಎಂ. ಗುರೆಡ್ಡಿ)

ದನ್ನು ನಾನೀಗ ಹೇಳಬಯಸುತ್ತೇನೆ. ಈ ಯೋಜನೆಯಿಂದ ನಮಗೆ ತೀವ್ರ ಪ್ರತಿಫಲ ಬರುತ್ತದೆ. ಈ ವಿಚಾರ ಸರ್ಕಾರದವರಿಗೂ ಗೊತ್ತಿದೆ. ಆದುದರಿಂದ ಅವರು ಈ ಬಾಬಿಗೆ ಹೆಚ್ಚಿನ ಗಮನ ಕೊಡಬೇಕೆಂದು ಈ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಈ ಹಿಂದೆ ಈ ಟೆನೆನ್ಸಿ ಖಾಯಿದೆಇದ್ದ ಕಡೆಗಳಲ್ಲಿ ಕೆಲವು ರೈತರಿಗೇನು ಕೇವಲ 5-6 ಎಕರೆ ಜಮೀನು ಮಾತ್ರ ಇತ್ತೋ ಅಷ್ಟೇ ಅವರಿಗೆ ಸಾಕು ಎಂತ ಹೇಳಲಾಗಿತ್ತು. ಆದರೆ ಅವರಿಗೆ ಆ ಜಮೀನಿನಿಂದ ಅವರು ಅಸೆಸ್‌ಮೆಂಟನ್ನು ಕೊಡಲಿಕ್ಕೂ ಸಹ ಸಾಕಾಗುವಷ್ಟು ಉತ್ಪತ್ತಿ ಬರುತ್ತಿರಲಿಲ್ಲ. ಆಗ ಜಮೀನು ಉತ್ಪತ್ತಿ ಕಡಮೆಯಾಗಿತ್ತು. ಅಂಥ ಕಡೆಗಳಲ್ಲಿ ಈಗ ಬಾವಿಗಳನ್ನು ತೆಗೆದಿದ್ದಾರೆ. ತುಂಬಾ ಅನುಕೂಲವಾಗಿದೆ ಆದರೆ ಈಗ ಅತನಿಗೆ ಈ ವಿಚಾರದಲ್ಲಿ ಏನೊಂದು ತೊಂದರೆಯಾಗಿದೆ ಎಂದರೆ ಸರ್ಕಾರದವರು ಹಾಕಿರತಕ್ಕ ಕೆಲವು ಟರ್ಮುಗಳ ರೆಸ್ಟ್ರಿಕ್ಷ್ ಏನಿವೆ ಅವನ್ನು ಹಾಕಬಾರದು. ಹಾಗೆ ಮಾಡಿದರೇನೇ ಅಲ್ಲಿ ಪೂರ್ಣ ಉತ್ಪತ್ತಿ ತೆಗೆಯಲು ಸಾಧ್ಯವಾಗುತ್ತದೆ. ಆದರೆ ನಾವು ಈ ಕೃಷ್ಣಾ-ಗೋದಾವರಿ ನದೀ ನೀರಿನ ವಿಚಾರಕ್ಕೆ ಸರ್ಕಾರದವರ ಗಮನವನ್ನು ಹೆಚ್ಚು ಸೆಳೆಯ ಬೇಕಾಗಿದೆ. ನಾವು ಈ ಕಾರ್ಯವನ್ನು ಕೇಂದ್ರ ಸರ್ಕಾರದ ಲೆವಲ್ಲಿನಲ್ಲೂ ಇಲ್ಲವೇ ಸುಪ್ರೀಂ ಕೋರ್ಟಿನ ಲೆವಲ್ ನಾದರೂ ಹೋಗಿ ತೀರ್ಮಾನ ಪಡೆಯತಕ್ಕ ಪ್ರಸಂಗ ಬರಬಹುದು. ಆದರೆ ಈ ಕಾರ್ಯ ನಿಧಾನವಾಗು ತ್ತದೆಂದು ಹೇಳಿದ ಹಾಗಾಯಿತು. ಆದಕಾರಣ ಸದ್ಯ ಈ ಸಣ್ಣ ನೀರಾವರಿಗಳಿಗೇ ಹೆಚ್ಚು ಹೆಚ್ಚು ಗಮನ ಕೊಡಬೇಕಾಗಿದೆ. ಇಲ್ಲಿಯತನಕ ಯಾವ ರೀತಿ ಈ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಲು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತೋ ಅದೇ ರೀತಿ ಈ ನೀರಾವರಿ ಬಾಬಿನಲ್ಲೂ ಪ್ರಯತ್ನ ಮಾಡಬೇಕು. ಆದರೆ ಹೀಗೆ ಬರೀ ನೀರಾವರಿ ಸೌಕರ್ಯವೊಂದನ್ನು ಒದಗಿಸಿದರೇ ಸಾಲದು. ಅದಕ್ಕೆ ಸಹಾಯವಾದ ಇನ್ನಿತರ ಗೊಬ್ಬರ, ಬೀಜ ಇತ್ಯಾದಿಗಳನ್ನು ಒಕ್ಕಲುತನದವರಿಗೆ ಹೆಚ್ಚು ಹೆಚ್ಚು ಒದಗಿಸಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಗೊಬ್ಬರ-ಉತ್ತಮ ಬೀಜ ಇತ್ಯಾದಿಗಳನ್ನು ಒದಗಿಸದೆ ಬರಿ ನೀರಿನಿಂದಲೇ ಹೆಚ್ಚು ಧಾನ್ಯಗಳ ಉತ್ಪತ್ತಿ ಆಗುವುದಿಲ್ಲ. ಆದುದರಿಂದ ನಾನು ಇಷ್ಟೆಲ್ಲವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ದೇಶವು ಒಕ್ಕಲುತನಕ್ಕೆ ಪ್ರಾಮುಖ್ಯವಾದಂಥದೇಶ. ಇಲ್ಲಿಯತನಕ ನಾವು ನೂರಾರು ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ಪರರಾಷ್ಟ್ರಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಹೀಗೆ ನಾವು ಪರರಾಷ್ಟ್ರಗಳನ್ನು ಅವಲಂಬಿಸದಿರಬೇಕಾದರೆ ನಮ್ಮಲ್ಲಿರತಕ್ಕ ರೈತರಿಗೆ ನಾವು ಹೆಚ್ಚು ಹೆಚ್ಚು ಸೌಲತ್ತುಗಳನ್ನು ಒದಗಿಸಿದರೆ ನಮಗೆ ಹೆಚ್ಚಿನ ಪ್ರಯೋಜನವುಂಟು. ಸರ್ಕಾರದವರು ನಮ್ಮ ರೈತರಿಗೆ ಬರಿ ಈ ಒಂದು ಗೊಬ್ಬರ, ನೀರಾವರಿ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟ ಮಾತ್ರಕ್ಕೆ ನಮಗೆ ಒಂದು ಹೆಚ್ಚಿನ ಬೆಳೆ ಬರುತ್ತದೆಂದು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ರೈತನು ಬೆಳೆಯತಕ್ಕ ಬೆಳೆಗೆ ನಾನಾ ತರದ ರೋಗಗಳು ಬೇರೆ ಬರುತ್ತದೆ. ಆದುದರಿಂದ ರೈತರಿಗೆ ಗೊಬ್ಬರ ಇತಾದಿ ಸೌಕರ್ಯಗಳನ್ನು ನೀಡಿರುವಂತೆ ಅವರಿಗೆ ಈ ಬೆಳೆಗಳನ್ನು ನಾಶಪಡಿಸತಕ್ಕ ಕ್ರಿಮಿ ಕೀಟಗಳನ್ನು ನಾಶಪಡಿಸತಕ್ಕ ಔಷಧಿಗಳನ್ನು ಕಂಡು ಹಿಡಿದು ಅದನ್ನು ರೈತರಿಗೆ ತೀವ್ರವಾಗಿ ಒದಗಿಸ ಬೇಕು. ಹೀಗೆ ಈ ಔಷಧಿಗಳನ್ನು ಸರಬರಾಯಿಮಾಡದೆ ಇತರ ಸೌಲಭ್ಯಗಳನ್ನು ಒಕ್ಕಲುತನದವರಿಗೆ ಒದಗಿಸಿದರೂ ಪ್ರಯೋಜನವಿಲ್ಲ. ಹೀಗಾಗಿ ಮೊನ್ನೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ-ಇಂಡಿಗಿ, ಸಿಂಧಿಗಿ, ಮುದ್ದೇಬಿಹಾಳ, ರೋಣ ಇತ್ಯಾದಿ ಅನೇಕ ಸ್ಥಳಗಳಲ್ಲಿ ಮುಂಗಾರಿ ಫಸಲು ಸಂಪೂರ್ಣವಾಗಿ ಯೋಯಿತು. ಹೀಗೆ ಆ ಜೋಳದ ಬೆಳೆಗೂ ಸಹ ಒಂದು ಜಾತಿ ಚಿಟ್ಟೆಹುಳಗಳು ಬಿದ್ದು ಆ ಪೀಕೂ ಸಹ ಸುಮಾರು ಒಂದು ಲಕ್ಷ ಎಕರೆಗಳಲ್ಲಿದ್ದುದಲ್ಲಿಹಾಳಾಗಿಯೋಯಿತು. ಹೀಗಾಗಿ ರೈತನ ವೃತ್ತಿಯು ಬಹಳ ಅಪಾಯಕಾರಿ, ಆದದ್ದರಿಂದ ಎಷ್ಟು ಶ್ರಮ ಪಟ್ಟರೂ ಪ್ರಯೋಜನ ಸಾಕಷ್ಟು ಸಿಗುತ್ತಿಲ್ಲ. ಕಷ್ಟಪಟ್ಟು ಉತ್ತಿ, ಬಿತ್ತಿ, ಗೊಬ್ಬರಹಾಕಿ ಪೀಕನ್ನು ಬೆಳೆಸಿದರೂ ಆ ಬೆಳೆ ಕೈಸೇರುತ್ತೆಂಬ ಭರವಸೆ ರೈತನಿಗಿಲ್ಲ. ಇಂಥ ರೈತನ ಹೀನಸ್ಥಿತಿಯ ಪರಿಸ್ಥಿತಿಯನ್ನು ಆದಷ್ಟು ಬೇಗ ಹೋಗಲಾಡಿಸಬೇಕು. ಇನ್ನು ಮುಂದಕ್ಕಾದರೂ ಈ ಜೋಳದ ಪೀಕಿಗೆ ಅಪಾಯವಾಗದಂತೆ ಮುಂಗಾರಿ ಬೆಳೆಗಳನ್ನಿಡು ವುದಕ್ಕೆ ಮುಂಚಿತವಾಗಿಯೇ ಈ ರೋಗ ತಲೆಹಾಕದಂತೆ ಮಾಡಲಿ, ಆ ಜೋಳದ ಪೀಕಾಗತಕ್ಕ ಕ್ಷೇತ್ರ ವನ್ನೆಲ್ಲ ಸರ್ವೆಮಾಡಿಸಿ ಅಲ್ಲಿಗೆ ತಕ್ಕಪ್ರಯತ್ನಗಳನ್ನು ಕೂಡಲೆ ಕೈಗೊಳ್ಳುವಂತೆ ಏರ್ಪಾಡು ಮಾಡ ಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಇಲ್ಲಿಗೆ 3-4 ವರ್ಷ ಗಳಿಂದಲೂ ಜೋಳದಪೀಕು ಸರಿಯಾಗಿ ಆಗುತ್ತಿಲ್ಲ. ಆದುದರಿಂದ ಈ ಪೀಕಿಗೆ ಬರತಕ್ಕ ರೋಗ ನಿವಾರಣೆಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪವರ್ ವಿಚಾರ: ಇತ್ತೀಚೆಗೆ ನೀರಾವರಿ ಯೋಜನೆಗಳ ಸಂಬಂಧದಲ್ಲೂ ರೈತರಿಗೆ ಹೆಚ್ಚು ಹೆಚ್ಚಾಗಿ ಪವರನ್ನು ಕೊಡಲಿಕ್ಕೆ ಹತ್ತಿದ್ದಾರೆ. ಈಗಾಗಲೇ ನಮ್ಮ ನಾಯಕರು ಹೇಳಿರುವಂತೆ ಈ ಪವರ್ ಉತ್ಪತ್ತಿಯ ಟಾರ್ಗೆಟ್ಟನ್ನು 1964 ರೊಳಗೆ ಮುಟ್ಟಲು ಸಾಧ್ಯವಿದೆಯೆಂಬುದನ್ನು ಅವರು

ತೋರಿಸಿದ್ದಾರೆ. ಈ ದಿವಸ ನಮ್ಮ ಈ ಕೈಗಾರಿಕೆಗಳಿಗೆಲ್ಲ ಹೇಗೆ ಪಾವರ್ ಅಗತ್ಯವಿರುತ್ತದೋ ಹಾಗೆ ಈ ಒಕ್ಕಲುತನದವರ ವೃತಿಗೂ ಈ ಪಾವರ್‌ನ ಅಗತ್ಯವಿದೆ. ಒಕ್ಕಲುತನ ವೃದ್ಧಿಯಾಗಬೇಕಾದರೆ ರೈತನಿಗೆ ನೀರಾವರಿ ಸೌಲಭ್ಯಗಳು, ಉತ್ತಮ ಜಾತಿ ಬಿತ್ತನೆ ಬೀಜಗಳು, ಒಳ್ಳೆಯ ಗೊಬ್ಬರ, ಪಾವರ್ ಜೊತೆಗೆ ವ್ಯವಸಾಯ ಮಾಡತಕ್ಕ ಮನುಷ್ಯನ ಆಸಕ್ತಿ ಇವುಗಳೆಲ್ಲ ಇದ್ದರೇನೇ ಒಕ್ಕಲುತನ ಅಭಿವೃದ್ಧಿಯಾಗುವುದು. ನಮ್ಮ ದೇಶದ ಅಭಿವೃದ್ಧಿ ಈ ಒಕ್ಕಲುತನದವರಮೇಲೆ ನಿಂತಿದೆ ಆದ ಕಾರಣ ಈ ದಿವಸ ಈ ಒಕ್ಕಲುತನದ ಅಭಿವೃದ್ಧಿ ಕೆಲವು ಕಡೆಗಳಲ್ಲಿ ಎಷ್ಟು ಸುಧಾರಣೆಯಾಗಬೇಕಾಗಿತ್ತೋ ಅಷ್ಟು ಸುಧಾರಣೆಯಾಗಿಲ್ಲ.

ಹೀಗೆ ನಮ್ಮಲ್ಲಿ ಈ ದಿವಸ ಆ ಹತ್ತಿಬೆಳೆ ಬೆಳೆಯುತಕ್ಕ ರೈತನಸ್ಥಿತಿಯೂ ಬಹಳ ಶೋಚನೀಯವಾಗಿದೆ. 1957ರ ಅಂಕಿಅಂಶಗಳಿಗೂ, ಈಗಿನ ಅಂಕಿಅಂಶಗಳಿಗೂ, ಹೋಲಿಕೆ ಮಾಡಿದರೆ ಇದು ಗೊತ್ತಾಗುತ್ತದೆ. ಇದಕ್ಕೆ ಕಾರಣಗಳೂ ಇವೆ. ಮುಂಬೈ ಕರ್ಣಾಟಕ ಪ್ರಾಂತದ ಧಾರ್‍ವಾಡ, ಬಿಜಾಪುರ ಮತ್ತು ರಾಯಚೂರು ಪ್ರಾಂತದಲ್ಲಿ ಲಕ್ಷ್ಮಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಇಲ್ಲಿಗೆ 5 ವರ್ಷಗಳಿಂದಲೂ ರಿಸರ್ಚ್‌ಮಾಡಿ ಒಳ್ಳೆಯ ಉತ್ತಮಜಾತಿ ಬೀಜವನ್ನು ಒದಗಿಸುತ್ತಿದ್ದರು. ಆ ಬೀಜಕ್ಕೆ ಮಳೆಯ ಹಾಗೂ ಹುಳುಗಳ ಹೊಡೆತವನ್ನು ತಡೆಯುವಶಕ್ತಿಯಿತ್ತು. ಇಲ್ಲಿಗೆ 4-5 ವರ್ಷಗಳಿಂದ ಈ ಬೆಳೆಗೆ ಯಾವ ರೋಗವೂ ಬರುತ್ತಿರಲಿಲ್ಲ. ಆದರೆ ಈ ಭಾಗದಲ್ಲಿನ್ನೂ ರಿಸರ್ಚಿನ ಕೊರತೆಯಿದೆ. ಈ ರಿಸರ್ಚ್ ಖಾತೆಯಲ್ಲಿ ಕೆಲಸ ಮಾಡತಕ್ಕ ನೌಕರರು ತಮ್ಮ ವೃತ್ತಿಯಲ್ಲಿ ಆಸಕ್ತಿ ಹಾಗೂ ಧೈರ್ಯವನ್ನು ಕಳೆದುಕೊಂಡಿದ್ದಾರೆ. ಅವರಿಗೆ ಸರ್ಕಾರದವರು ಸರಿಯಾದ ಸೌಲತ್ತುಗಳನ್ನು ಕೊಡುತ್ತಿಲ್ಲವೆಂದು ಅವರು ಉತ್ಸಾಹದಿಂದ ಕೆಲಸ ಮಾಡುತ್ತಿಲ್ಲ. ಅವರಿಗೆ ಪ್ರಮೋಷನ್, ಭಡ್ತಿಗಳ ವಿಚಾರದಲ್ಲಿ ನಿರ್ದಿಷ್ಟನೀತಿಯಿಲ್ಲದೆ ಅವರನ್ನು ಇನ್‌ಚಾರ್ಜಿನಲ್ಲಿ ಇಟ್ಟಿರುವುದರಿಂದ ಅವರ ಮನಸ್ಸೆಲ್ಲ ಇಳಿದು ಹೋಗಿದೆ. ಆದರೆ ನಮ್ಮ ದೇಶದಲ್ಲಿ ಈ ಅಗ್ರಿಕಲ್‌ಚರಲ್ ಬಾಬು ಬಹಳ ಮಹತ್ವದ್ದದೆ. ದೇಶದಲ್ಲಿರತಕ್ಕ ಶೇ. 80-85 ರಷ್ಟು ಭಾಗದಜನ ಈ ಒಕ್ಕಲುತನದ ವೃತ್ತಿಯಲ್ಲಿರುತ್ತಾರೆ. ಇಷ್ಟು ಅಧಿಕ ಸಂಖ್ಯಾಂತರ ಬಗ್ಗೆ ಶ್ರಮಿಸುತ್ತಿರುವ ಜನರಿಗೆ ಅನ್ಯಾಯವಾಗಬಾರದು. ಈ ಇಲಾಖೆಯಲ್ಲಿರತಕ್ಕ ಕಷ್ಟನಿಷ್ಠೂರಗಳನ್ನು ಸರ್ಕಾರದವರು ಜಾಗ್ರತೆ ಸರಿಪಡಿಸಿ, ಅಲ್ಲಿರತಕ್ಕ ನೌಕರರು ಬಂದು ಉತ್ಸಾಹದಿಂದ ಕೆಲಸಮಾಡುವಂತೆ ಏರ್ಪಾಡನ್ನು ಮಾಡಿದರೆ ಆಗಲೇ ನಮ್ಮ ಈ ಒಕ್ಕಲುತನದ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

ಇನ್ನು ನಮ್ಮ ದೊಡ್ಡ ಪ್ರಮಾಣದ ನೀರಾವರಿ ಯೋಜನೆಬಗ್ಗೆ ನಮ್ಮ ನಾಯಕರು ಒಂದು ಆಶ್ವಾಸನವನ್ನು ಕೊಟ್ಟಿದ್ದಾರೆ. ನಮಗೆ ನ್ಯಾಯವಾಗಿ ದೊರೆಯಬೇಕಾಗಿರುವ ಹಕ್ಕಿನ ನೀರನ್ನು ನಾವು ತೆಗೆದುಕೊಂಡೇತೀರುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನಮ್ಮ ಅಕ್ಕ ಪಕ್ಕದ ರಾಜ್ಯಗಳಾದ ಆಂಧ್ರದಲ್ಲಿ ಈ ನೀರಾವರಿ ಯೋಜನೆಗಳ ಸೌಕರ್ಯ ಶೇಕಡ 28ಕ್ಕೆ ಏರಿದೆ, ಮದ್ರಾಸ್ ರಾಜ್ಯದಲ್ಲಿ ಶೇ. 40 ಕ್ಕೇರಿದೆ. ಆದರೆ ನಮ್ಮ ರಾಜ್ಯದಲ್ಲಿ ಈ ಸೌಲಭ್ಯ ಆ ಮಟ್ಟಕ್ಕೇರಲು ಇನ್ನೂ ಎಷ್ಟು ಕಾಲ ಬೇಕೋ ಗೊತ್ತಿಲ್ಲ. ಈಗಂತೂ ನಮ್ಮ ರಾಜ್ಯದಲ್ಲಿ ಅಷ್ಟು ನೀರಾವರಿ ಅಭಿವೃದ್ಧಿಯಾಗಿಲ್ಲ.

ನನ್ನ ದೃಷ್ಟಿಯಲ್ಲಿ ನಾವು ಹಳ್ಳಿಯವರಿಗಾಗಿ ಕಟ್ಟುವ ಯೋಜನೆಗಳ ಹಣ ಏನಾಗಿದೆ ಎಂದರೆ ಇಂಥ ವಿಧಾನಸೌಧಗಳನ್ನು ಕಟ್ಟುವುದರಲ್ಲಿ, ಸಿಮೆಂಟ್‌ರೋಡ್ ನಿರ್ಮಾಣಮಾಡುವುದರಲ್ಲಿ ಖರ್ಚಾಗುತ್ತಿದೆ. ಹಿಗಾಗಬಾರದು. ನಿಜವಾದ ಸಮಾಜವಾದದ ಸಮಾಜ ಸ್ಥಾಪನೆಮಾಡಬೇಕಾದರೆ ಜನತೆಗೆ ಉಪಯೋಗವಾಗುವ ಕಾರ್ಯಗಳನ್ನು ತೆಗೆದುಕೊಳ್ಳಬೇಕು. ಗೋಳಗುಮ್ಮಟವನ್ನು ಕಟ್ಟಿದ ಇತಿಹಾಸ ತೆಗೆದುಕೊಂಡರೆ ಬಿಜಾಪುರವನ್ನು ನೋಡಿದರೆ ಗೊತ್ತಾಗುತ್ತದೆ. ಹಿಂದೆ ಇಂಥ ಕಟ್ಟಡಗಳು, ಮಸೀದಿ ಇವುಗಳನ್ನು ಕಟ್ಟುವುದರಲ್ಲಿ ಹಣವ್ಯಯವಾಯಿತು. ಈಗ ನಮ್ಮಲ್ಲಿ ವ್ಯವಸಾಯ ಅಭಿವೃದ್ಧಿಯಾಗಬೇಕು, ಉತ್ಪನ್ನ ಹೆಚ್ಚಾಗಬೇಕು, ಕೈಗಾರಿಕೆಗಳು ಬೆಳೆಯಬೇಕು ಎನ್ನುವುದಕ್ಕೆ ಯಾವ ಹೆಜ್ಜೆ ಇಟ್ಟುನಡೆದರೆ ಸಾಧ್ಯವೆನ್ನುವುದನ್ನು ಕಲ್ಪನೆಮಾಡಿಕೊಂಡಿದ್ದೇವೆ. ರಸ್ತೆಯ ಸಲುವಾಗಿ ಖರ್ಚುಮಾಡುವುದು, ಸೇತುವೆಯ ಸಲುವಾಗಿ ಖರ್ಚುಮಾಡುವುದು, ಒಕ್ಕಲುತನದ ಸಲುವಾಗಿ, ನೀರಾವರಿ ಸಲುವಾಗಿ, ಕೈಗಾರಿಕೆಗಳ ಸಲುವಾಗಿ ಹಣವನ್ನು ಒದಗಿಸಿರುವುದನ್ನು ಬಜೆಟ್ಟಿನಲ್ಲಿ ನೋಡುತ್ತಿದ್ದೇವೆ. ಈ ಕಾರ್ಯಗಳಿಗೆ ಲಕ್ಷ್ಯಕೊಟ್ಟಿರುವುದು ಸಂತೋಷಕರ ಸಂಗತಿ ಎಂದು ನಾನು ತಿಳಿದುಕೊಂಡಿದ್ದೇನೆ.

11 A.M.

ವಿದ್ಯಾಭ್ಯಾಸದ ವಿಷಯದಲ್ಲಿ ನಮ್ಮ ಮಂತ್ರಿಗಳು ಒಂದು ಮಹತ್ವವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ಇದರಲ್ಲಿ ನನಗೆ ಒಂದು ಸಂಶಯ ಬರುತ್ತದೆ. ವಿದ್ಯಾಭ್ಯಾಸ ಬೆಳೆಯಬೇಕು ಎಂದು ಹೇಳುವಾಗ ಅದಕ್ಕೆ ಬೇಕಾದ ಸ್ಥಳಾವಕಾಶ ಮತ್ತು ಶಿಕ್ಷಕರ ಕೊರತೆ ಇದೆ. ಒತ್ತಾಯ ಶಿಕ್ಷಣ ಈಗ ಜಾರಿಗೆ ಬಂದಿದೆ, ಓದಲಿಕ್ಕೆ ಹುಡುಗರು ಬಂದರೂ ಅದಕ್ಕೆ ಸರಿಯಾದ ಶಿಕ್ಷಕರಿಲ್ಲ, ಸ್ಥಳಾವ

(ಶ್ರೀ ಎಸ್. ಎಂ. ಗುರೆಡ್ಡಿ)

ಕಾಶವಿಲ್ಲ. ಇದನ್ನು ನೆನಪಿನಲ್ಲಿಟ್ಟುಕೊಂಡು ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ನಮ್ಮ ಶಿಕ್ಷಣ ಮುಂದೆ ಹೋಗುವುದಕ್ಕೆ ಅವಕಾಶವಿದೆ.

Free education ಕೊಡುವ ಸವಲತ್ತು ಪಟ್ಟಣವಾಸಿಗಳಿಗೇ ಹೋಗುತ್ತಿದೆ. ಪುಕ್ಕಟೆಯಾದ ಶಿಕ್ಷಣ ಕೊಡುತ್ತಾರೆಂದು ಹಳ್ಳಿಗಳಿಂದ ಪಟ್ಟಣಗಳಿಗೆ ತಮ್ಮ ಹುಡುಗರನ್ನು ಕಳಿಸಿಕೊಡಲು ರೈತರಿಗೆ ಸಾಧ್ಯವಿದೆಯೇ? ಬೆಂಗಳೂರಿನ ಸಮೀಪದ ಹಳ್ಳಿಯ ಜನ ಬಂದು ಇಲ್ಲಿ ಶಿಕ್ಷಣ ಪಡೆಯಬೇಕಾದರೆ ಆ ಖರ್ಚನ್ನು ವಹಿಸುವುದಕ್ಕೆ ಸಾಧ್ಯವೇ ? ಮಧ್ಯಮವರ್ಗದ ಜನರಿಗೆ ಶಾಲೆ ಕಲಿಯಲಿಕ್ಕೆ ಸಾಧ್ಯವೇ ಇಲ್ಲ. ಪ್ರೈಮರಿ ವಿದ್ಯಾಭ್ಯಾಸವನ್ನು ಮುಗಿಸಿ, ಬಹಳ ತ್ರಾಸಪಟ್ಟು ಸೆಕೆಂಡರಿ ವಿದ್ಯಾಭ್ಯಾಸವನ್ನು ಮುಗಿಸಬಹುದು. ಕಾಲೇಜ್ ಶಿಕ್ಷಣ, ಟೆಕ್ನಿಕಲ್ ಶಿಕ್ಷಣ, ಮೆಡಿಕಲ್ ಶಿಕ್ಷಣ, ಇಂಥ ಪ್ರಗತಿಪರವಾದ ಹೆಚ್ಚಿನ ಶಿಕ್ಷಣವನ್ನು ಪಡೆಯಲಿಕ್ಕೆ ಅವನಿಗೆ ಸಾಧ್ಯವಿಲ್ಲ. ನಾವು ಇನ್ನೂ ಆರ್ಥಿಕವಾಗಿ ಅಷ್ಟು (sound) ಭದ್ರವಾಗಿಲ್ಲ, ನಾವು ಆರ್ಥಿಕವಾಗಿ ಭದ್ರವಾಗಬೇಕಾಗಿದೆ. ಫೀ ಮಾಫಿ ಮಾಡಿದರೆ, triple benefit scheme ತಂದರೆ, ಪುಕ್ಕಟೆಯಾಗಿ ಪುಸ್ತಕಗಳನ್ನು ಹಂಚಿದರೆ, ಅದರಿಂದ ಶಿಕ್ಷಣ ಬೆಳೆಯುವುದಿಲ್ಲ. ಸರ್ಕಾರ ಇದರ ಕಡೆಗೆ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಒಕ್ಕಲುತನದಲ್ಲಿ ಒಂದಂಶ ಹೇಳುವುದನ್ನು ಮರೆತಿದ್ದೆ. ಒಕ್ಕಲುತನದಲ್ಲಿ ಹೆಚ್ಚಾಗಿ ಬೆಳೆಯಬೇಕಾದರೆ ಭೂಮಿ ಫಲವತ್ತಾಗಿರಬೇಕು. ನನಗೆ ಬಂದಿರುವ ಒಂದು ಅನುಭವವನ್ನು ಹೇಳುತ್ತೇನೆ. ನಮ್ಮ ಬಿಜಾಪುರ ತಾಲ್ಲೂಕಿನಲ್ಲಿ ಕೆಲವು ನದಿಗಳು ಹರಿಯುತ್ತವೆ. ಅಲ್ಲಿ black cottonsoil ನಲ್ಲಿ ಲಕ್ಷಾಂತರ ಎಕರೆ ಭೂಮಿ ಇವೊತ್ತು ಬೆಳೆಯಲಿಕ್ಕೆ ಮತ್ತು ಬೆಳೆಯನ್ನು ಮಾಡಲಿಕ್ಕೆ ಅರ್ಹತೆಯನ್ನು ಹೊಂದಿಲ್ಲ. ಇದಕ್ಕೆ ಮುಖ್ಯ ಕಾರಣ ಅಲ್ಲಿ ಭೂಮಿ ಚೌಳು ಆಗಲಿಕ್ಕೆ ಹತ್ತಿದೆ. ಇದಕ್ಕೆ ಸಾಕಷ್ಟು ಗಮನ ಕೊಡಿ ಎಂದು ಕೇಳಿಕೊಂಡೆವು. ಏನೋ ಒಂದು ಯೋಜನೆಮಾಡಿದ್ದೇವೆಂದು ಹೇಳಿದ್ದಾರೆ. ಇದರ ಪ್ರಕಾರ ನಾಲ್ಕೈದು ಎಕರೆ ಭೂಮಿ ಇದ್ದರೆ ಹತ್ತಿಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ಇಂಥ ಯೋಜನೆಯನ್ನು ಕೇಳಿ ಅಲ್ಲಿಯ ಜನ ನಿರುತ್ಸಾಹಿಗಳಾಗಿದ್ದಾರೆ. ವ್ಯವಸಾಯವನ್ನು ಅಭಿವೃದ್ಧಿಪಡಿಸಲಿಕ್ಕೆ ಹೇಗೆ ಮಾಡಬೇಕು ಎಂದು ನಮ್ಮ ಯೋಜನೆಗಳೇನೋ ಇವೆ. ಆದರೆ ಭೂಮಿಯನ್ನು ಸರಿಯಾಗಿ ಮಾಡಲಿಕ್ಕೆ ಒಂದು ಯೋಜನೆಯೂ ಇಲ್ಲ. ಭೂಮಿ ಕೆಟ್ಟು ಹೋದರೆ ಬೆಳೆ ಪಡೆಯಲಿಕ್ಕೆ ಅರ್ಹವಾಗುವುದಿಲ್ಲ. ಆದ ಕಾರಣ ಸರ್ಕಾರದವರು ತೀವ್ರವಾಗಿ ಒಂದು ಸಂಶೋಧನಾ ಕೇಂದ್ರವನ್ನು ಬಿಜಾಪುರದಲ್ಲಿ ತೆರೆದು, ಏಕೆ ಹೀಗಾಗಿದೆ ಎಂದು ಅವರು ತಿಳಿದುಕೊಂಡು ಅದಕ್ಕೆ ತಕ್ಕ ಪರಿಹಾರವನ್ನು ಕೈಗೊಳ್ಳುತ್ತಾರೆಂದು ನಾನು ಆಸೆ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು) —ಮಾನ್ಯ ಸಭಾಪತಿಯವರೇ, 1963-64 ನೇ ಸಾಲಿನ ಆಯವ್ಯಯ ಅಂದಾಜುಪಟ್ಟಿಯ ಮೇಲೆ ಚರ್ಚೆ ನಡೆದಿರತಕ್ಕ ಕಾಲದಲ್ಲಿ ಬಹಳ ಮಂದಿ ಮಾನ್ಯ ಸದಸ್ಯರು ಈ ಸಂಸ್ಥಾನದ ಭವಿಷ್ಯವನ್ನು ನಿರ್ಧರ ಮಾಡತಕ್ಕ, ಪ್ರಾಮುಖ್ಯವಾಗಿರತಕ್ಕ ಕೆಲವು ವಿಷಯಗಳ ಮೇಲೆ ಉಪಯುಕ್ತವಾಗಿರತಕ್ಕ ಸಲಹೆಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಈ ದೇಶಕ್ಕೆ ಹೆಚ್ಚಿನ ಉಪಯೋಗವನ್ನು ಪಡೆಯಬೇಕು ಎನ್ನುವ ವಿಷಯ ಮತ್ತು ಈ ತುರ್ತು ಪರಿಸ್ಥಿತಿಯಲ್ಲಿ ಯಾವ ರೀತಿ ಸರ್ಕಾರ ಸಿದ್ಧತೆಗಳನ್ನು ಮಾಡಿಕೊಂಡು ಕೇಂದ್ರ ಸರ್ಕಾರದವರಿಗೆ ನೆರವಾಗಬೇಕಾಗಿದೆ ಮತ್ತು ಆಹಾರ ಪರಿಸ್ಥಿತಿ ವಿಷಯದಲ್ಲಿ ಎಷ್ಟರ ಮಟ್ಟಿಗೆ ನಾವು ಹೆಚ್ಚಿನ ಶ್ರಮವನ್ನು ವಹಿಸಬೇಕಾಗಿದೆ ಎಂಬುದನ್ನೆಲ್ಲಾ ತಿಳಿಸಿದ್ದಾರೆ. ಮತ್ತೆ ಕೆಲವು ಮಹನೀಯರು ವರ್ಷಂಪ್ರತಿ ಈ ಒಂದು ಅಧಿವೇಶನ ಬಂದಾಗ ಹೇಳುವಂತೆ ಕೆಲವು ವಿಷಯಗಳನ್ನು ಪುನರುಚ್ಚಾರ ಮಾಡಿದ್ದಾರೆ. ಅದರಲ್ಲಿ ಮಂತ್ರಿಗಳ ಪ್ರವಾಸ ಉಪಯುಕ್ತವಾಗಿರಬೇಕು ಮತ್ತು ಪ್ರವಾಸದ ಕಾಲದಲ್ಲಿ ಜನರು ತಮ್ಮ ಸಂಕಟಗಳನ್ನು ಏನು ತಿಳಿಸುತ್ತಾರೆ ಮತ್ತು ಸ್ಥಳದಲ್ಲಿನ ಆಡಳಿತದಲ್ಲಿ ಏನೇನು ನ್ಯೂನತೆಗಳು ಕಂಡುಬರುತ್ತವೆ ಅವುಗಳನ್ನು ಸಾಧ್ಯವಾದನುಟ್ಟಿಗೆ ಆ ಸ್ಥಳದಲ್ಲೇ ಪರಿಹಾರಮಾಡತಕ್ಕದ್ದು, ಅಲ್ಲಿ ಮಾಡುವುದಕ್ಕೆ ಸಾಧ್ಯವಾಗದೆ ಇದ್ದ ಪಕ್ಷದಲ್ಲಿ ಪ್ರವಾಸದಿಂದ ವಾಪಸು ಬಂದ ಮೇಲೆ ಆ ಒಂದು ಪ್ರವಾಸದಲ್ಲಿ ಏನೇನು ವಿಷಯಗಳನ್ನು ಸಾರ್ವಜನಿಕರು, ಅವರ ಪ್ರತಿನಿಧಿಗಳು ಮಂತ್ರಿಗಳ ಗಮನಕ್ಕೆ ತಂದಿರುತ್ತಾರೆ ಅವುಗಳನ್ನು ಕಾರ್ಯರೂಪಕ್ಕೆ ತರುವಂಥಾದ್ದು ಸರಿಯಾಗಿದೆ. ಆ ರೀತಿ ಮಾಡದೆ ಕೇವಲ ಸಂಚಾರ ದೃಷ್ಟಿಯಿಂದ ಅಥವಾ ಹಣವನ್ನು ಗಳಿಸತಕ್ಕ ದೃಷ್ಟಿಯಿಂದ ಪ್ರವಾಸ ಮಾಡತಕ್ಕದ್ದು ಸರಿಯಲ್ಲವೆಂದು ಕೆಲವು ಮಹನೀಯರ ಟೀಕೆ ಇದೆ. ನನಗಾದರೂ, ಒಂದೇ ಒಂದು ಸಣ್ಣ ಕೆಲಸಕ್ಕಾಗಿ ಇಲ್ಲಿಂದ ಬೆಳಗಾಂಗಾಗಲೀ, ಅಥವಾ ಬಿಜಾಪುರಕ್ಕಾಗಲೀ, ಅಥವಾ ಇನ್ನು ಯಾವುದೇ ರೀತಿಯಾಗಿ ವಿಶೇಷ ಕಾರ್ಯ ಗೌರವಗಳನ್ನು ಒಳಗೊಳ್ಳದೆ ಕೇವಲ ಸಮಾರಂಭದಲ್ಲಿ ಭಾಗವಹಿಸತಕ್ಕ ರೀತಿಯಲ್ಲಿ ಪ್ರವಾಸವನ್ನು ಎಲ್ಲ

ಕಾಲಗಳಲ್ಲಿಯೂ ಎಲ್ಲ ಮಂತ್ರಿಗಳೂ ಕೈಗೊಳ್ಳತಕ್ಕದ್ದು ಅಷ್ಟು ಸರಿಯಲ್ಲವೆಂದು ಅನ್ನಿಸುತ್ತದೆ. ಇದನ್ನು ನಾನು ಒಪ್ಪುತ್ತೇನೆ.

ಈ ದೃಷ್ಟಿಯಿಂದ ಅನೇಕ ಸಂದರ್ಭಗಳಲ್ಲಿ, ನಾವು ಪ್ರವಾಸ ಮಾಡಿ ಕೆಲಸ ಮಾಡತಕ್ಕ ಕಾಲದಲ್ಲಿ, ಪ್ರಜಾಪ್ರತಿನಿಧಿಗಳಾಗಿರತಕ್ಕವರು, ಸಾಮಾನ್ಯ ಜನರು ಆಡಿಕೊಳ್ಳತಕ್ಕ ಮಾತನ್ನು ಇಲ್ಲಿ ನಮ್ಮಗಳ ಗಮನಕ್ಕೆ ತಂದಿಡುತ್ತಾರೆಂದು ಭಾವಿಸುತ್ತೇನೆ. ಅದಕ್ಕೋಸ್ಕರ ಈ ನಮ್ಮ ಮುಖ್ಯ ಮಂತ್ರಿಗಳು ಪ್ರವಾಸದಲ್ಲಿ ಹೋಗುವಾಗ ಜನಗಳಿಗೆ ಉಪಯುಕ್ತವಾಗುವ ರೀತಿಯಲ್ಲಿ ಮತ್ತು ಸರಿಯಾದ ರೀತಿ ಯಲ್ಲಿ ಒಂದು ಜಿಲ್ಲೆಗೆ ಹೋದಾಗ ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟಂತೆ ಅರಿತುಕೊಂಡು, ಚೆನ್ನಾಗಿ ತಿಳಿದುಕೊಂಡು ಅವನ್ನು ಬಗೆ ಹರಿಸಲು ಪ್ರಯತ್ನ ಮಾಡಬೇಕು. ಸಾರ್ವಜನಿಕರಿಗೂ ಮಂತ್ರಿಗಳ ಪ್ರವಾಸದಿಂದ ಅನುಕೂಲವಾಗುತ್ತದೆ. ಮತ್ತು ಮಂತ್ರಿಗಳ ಮೇಲೆ ಒಳ್ಳೆಯ ಪರಿಣಾಮವಾಗು ತ್ತದೆ. ಮತ್ತು ಮಂತ್ರಿಗಳು ಮತ್ತು ಉಪಮಂತ್ರಿಗಳು ಪ್ರವಾಸವನ್ನು ಕಡಿಮೆ ಮಾಡುವುದರ ಜೊತೆಗೆ ಜನಗಳಲ್ಲಿ ಯಾವ ರೀತಿಯಾಗಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಒಂದು ಕಾರ್ಯ ಕ್ರಮವನ್ನು ತೆಗೆದುಕೊಂಡು ಅದರಂತೆ ಮಾಡುತ್ತಿದ್ದೇವೆ. ಮಂತ್ರಿಗಳಾದ ಕೆಲವರಿಗೆ ಸರಳ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ. ನಿನ್ನೆ ಮೊನ್ನೆ ಚುನಾವಣೆಯಾಗಿ ಮಂತ್ರಿಗಳಾ ದಾಕ್ಷಣ ಏನೋ ಒಂದು ವೈಭವದಿಂದ ನಡೆಯತಕ್ಕ ರೀತಿಯಲ್ಲಿ ಹೋಗುತ್ತಾರೆ, ಎಂದು ಕೆಲವು ಮಾನನೀಯರು ತಿಳಿಸಿದರು. ನನಗಾದರೂ ಅನಿಸುತ್ತದೆ ಅಧಿಕಾರ ಬಹುಶಃ ನಾವು ತಿಳಿದು ಕೊಂಡಿರುವಂತೆ ಯಾರಿಗೂ ಶಾಶ್ವತವೇನಲ್ಲ. ಇದರಲ್ಲಿ ಕೇವಲ ಆಡಂಬರ ಜೀವನ ನಡೆಸುವುದ ರಿಂದಲೇ ನಮ್ಮ ಒಂದು ಅಧಿಕಾರಕ್ಕೆ ಹೆಚ್ಚು ಮಹತ್ವ ಬರುತ್ತದೆ ಎಂದು ತಿಳಿದುಕೊಳ್ಳುವವನು ನಾನಲ್ಲ. ನಾವು ಹಳ್ಳಿಯವರಾಗಿ ಹಳ್ಳಿಯ ರೈತನ ಸ್ಥಿತಿಗೆ ತಕ್ಕಂತೆ ಇಲ್ಲಿರುವುದು ಕಷ್ಟವಾಗಿದೆ. ಬೆಂಗಳೂರಿನ ಜೀವನಕ್ಕೆ ತಕ್ಕಂತೆ ಅನುಸರಿಸಿಕೊಂಡು ಹೋಗಬೇಕು. ಇಷ್ಟು ನಿಷ್ಠೆಯಿಂದ ಕೆಲಸ ಮಾಡಿದರೂ ಕೂಡ ಆಡಳಿತದ ಬಗ್ಗೆ ಒಂದು ಒಳ್ಳೆಯ ಮಾತನ್ನೂ ಆಡದಿದ್ದರೆ ಯಾವ ರೀತಿ ಪ್ರೋತ್ಸಾಹ ಸಿಗುತ್ತದೆ. ಆಡಳಿತದಲ್ಲಿ ಸತ್ಯ ನಿಷ್ಠೆಯಿಂದಿರಬೇಕು ಎಂದು ಹೇಳುತ್ತ ವೈಭವದಿಂದ ಜೀವನ ನಡೆಸುವುದನ್ನು ಬಿಟ್ಟು ಮಿತವ್ಯಯ ಮಾಡಿದರೆ ಸರಳ ಜೀವನ ಮಾಡುವುದಕ್ಕೆ ಬರುವು ದಿಲ್ಲವೆ ? ಸತ್ಯ, ನಿಷ್ಠೆಯಿಂದ ಆಡಳಿತ ನಡೆಸುವುದು, ಅದಕ್ಕೆ ತಕ್ಕಂತೆ, ಸಂಸ್ಥಾನಕ್ಕೆ ಸಂಬಂಧ ಪಟ್ಟಂತೆ ದೇಶದ ಘನತೆ, ಗೌರವಗಳನ್ನು ಇಟ್ಟುಕೊಂಡು ಹೋಗತಕ್ಕ ರೀತಿಯಲ್ಲಿ ತಮ್ಮ ಜೀವನ ವನ್ನು ಸಚಿವರು ನಡೆಸುವುದನ್ನು ಬೇಡವೆಂದು ಹೇಳುತ್ತೀರೇನು ? ಆದರೂ ಒಟ್ಟಿನಲ್ಲಿ ನಮ್ಮ ನಮ್ಮ ವೈಯಕ್ತಿಕ ಜೀವನದಲ್ಲಿ ಮತ್ತು ಸಾರ್ವಜನಿಕ ನಡೆವಳಿಕೆಗಳಲ್ಲಿ ಆಡಳಿತದಲ್ಲಿ ಲೋಪದೋಷಗಳು ಕಂಡು ಬಂದರೆ ಮಾನ್ಯ ಸಭೆಯಲ್ಲಿ ಅಥವಾ ವೈಯುಕ್ತಿಕವಾಗಿಯೂ ತಿಳಿಸಬಹುದು. ಸಾರ್ವ ಜನಿಕ ಆಡಳಿತದಲ್ಲಿ ದಾರಿ ತಪ್ಪಿದರೆ ಅದನ್ನು ತಿದ್ದಲು ತಮಗೆ ಹಕ್ಕಿದೆ. ಅದೂ ಕೂಡ ಒಂದು ರೀತಿಯಾದ ಅಂಕೆ ಸಂಖ್ಯೆಗಳಿರುವ ರೀತಿಯಲ್ಲಿ ನಮ್ಮನ್ನು ಯಾವತ್ತಾದರೂ ತೆಗೆಯುವುದಕ್ಕೆ ಈ ಮಾನ್ಯ ಸಭೆಗೆ ಅಧಿಕಾರವಿದೆ. ಈ ದೃಷ್ಟಿಯಿಂದ ನಾವು ಒಂದು ಒಳ್ಳೆಯ ಕೆಲಸ ಮಾಡಿದ್ದರೂ ಇಲ್ಲಿ ಒಂದು ಒಳ್ಳೆಯ ಮಾತನ್ನೂ ಹೇಳಲಿಲ್ಲ. ಟೀಕೆಯಿಲ್ಲಾದರೂ ಈ ರೀತಿ ತಪ್ಪು ದಾರಿಯಲ್ಲಿ ಹೋಗಿದ್ದೀರಿ, ಇದನ್ನು ಸರಿಯಾಗಿ ತಿದ್ದಿಕೊಳ್ಳಿ ಎಂದು ಹೇಳಿದರೆ ಆ ಮೇಲಾದರೂ ಅದನ್ನು ಸರಿ ಪಡಿಸಿಕೊಳ್ಳಲು ಬರುತ್ತದೆ. ಇವೊತ್ತು ಹೊರಗಡೆ ಬಹಳ ಟೀಕೆಗಳಾಗುತ್ತಿವೆ. ಯಾರು ಆ ಟೀಕೆಗಳನ್ನು ಮಾಡತಕ್ಕವರು ಎಂದರೆ ಅಧಿಕಾರದಲ್ಲಿದ್ದಂತಹ ಜನ ಹತ್ತಾರು ವರ್ಷಗಳಿಂದ ಆಡಳಿತ ವನ್ನು ನಡೆಸಿರತಕ್ಕ ಜನ ಇವೊತ್ತು ಟೀಕೆಗಳನ್ನು ಇಲ್ಲಿಯೂ ಮಾಡುತ್ತಾರೆ, ಹೊರಗಡೆಯೂ ಮಾಡುತ್ತಾರೆ. ನನಗಾದರೂ ಅರಣ್ಯ ಸಚಿವನಾದ ಮೇಲೆ ಅನಿಸುವುದು, ನಮ್ಮ ಕಾಡಿನಲ್ಲಿ ಹುಲಿ ಗಳಿರುತ್ತವೆ. ಈ ಹುಲಿ ಮನುಷ್ಯರ ರಕ್ತವನ್ನು ಒಂದು ಸಾರಿ ರುಚಿ ನೋಡಿದರೆ ಪುನಃ ಮನುಷ್ಯರ ರಕ್ತವನ್ನೇ ಹುಡುಕಿಕೊಂಡು ತಿರುಗುತ್ತದೆ. ಹಾಗೆ ಅಧಿಕಾರದಲ್ಲಿ ಒಂದು ಸಾರಿ, ಎರಡು ಸಾರಿ ಅಧಿಕಾರದ ಸವಿಯನ್ನು ತಿಳಿದಿರತಕ್ಕ ಜನ ಒಳಗಡೆ ಇದ್ದಾಗ ಏನು ಕೆಲಸ ಮಾಡ ಬೇಕು, ಏನು ಮಾಡಬೇಕಾಗಿಲ್ಲ ಎನ್ನುವುದನ್ನು ಹೇಳುವುದನ್ನು ಬಿಟ್ಟು ಬಿಟ್ಟು, ಇವೊತ್ತಿನ ದಿವಸ ಮೈಸೂರು ಸರ್ಕಾರ ದಕ್ಷತೆಯಿಂದ, ಸತ್ಯದಿಂದ, ನಿಷ್ಠೆಯಿಂದ ನಡೆಯುತ್ತಿಲ್ಲ. ದೇಶದ ಒಂದು ಹಿತವನ್ನು ಬಲಿಗೊಟ್ಟು ನಮ್ಮನ್ನು ಹಾಳುಮಾಡುತ್ತಿದ್ದಾರೆ ಎನ್ನುವಂತಹ ಟೀಕೆಗಳು ಅಧಿಕಾರ ಲಾಲಸೆಯಿಂದ ಕೂಡಿ ಮಾಡುತ್ತಾರೆ ಎಂದು ಹೇಳದೇ ವಿಧಿಯಿಲ್ಲ. ಇಂತಹ ಒಂದು ಮನೋ ಭಾವ ಕೃಷ್ಣಾ-ಗೋದಾವರಿಯ ಸಂಬಂಧವಲ್ಲೇ ಇರಲಿ ಅಥವಾ ಬೇರೆ ಯಾವುದರ ಬಗ್ಗೆ ಯಾಗಲೀ ಸಂಸ್ಥಾನದ ಹಿತವನ್ನು ಕಾಪಾಡತಕ್ಕ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಅಥವಾ ಇಲ್ಲಿರತಕ್ಕ ಬೇರೆ ಮಂತ್ರಿಗಳೇ ಆಗಲೀ ದೇಶ ಪ್ರೇಮದಿಂದ ಯಾವ ರೀತಿ ಸಂಸ್ಥಾನವನ್ನು ಮುಂದೆ ತೆಗೆದುಕೊಂಡು ಹೋಗಬೇಕು ಎನ್ನುವ ಆಶೆ ಆಕಾಂಕ್ಷೆಗಳನ್ನು ಹೊಂದಿದ್ದಾರೆ ಎನ್ನುವ ವಿವರ ಗಳನ್ನು ಈಗಾಗಲೇ ಇಲ್ಲಿ ಹೇಳಿದ್ದಾರೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಈ ಸಂಸ್ಥಾನದ

(ಶ್ರೀ ಬಿ. ರಾಚಯ್ಯ)

ಎಲ್ಲ ಕೆಲಸ ಕಾರ್ಯಗಳನ್ನೂ ಜನರ ಹಿತವನ್ನು ಕಾಪಾಡಲು ಸಂಪದ್ಯುಕ್ತವಾಗಿ ಮಾಡಬೇಕೆಂದು ಅಧಿಕಾರಕ್ಕೆ ಬರುವುದಕ್ಕೆ ಮುನ್ನ ಆಶೆ ಹೊಂದಿದ್ದವರೂ ಹಿರಿಯರೂ ಆದ ನಮ್ಮ ಮುಖ್ಯ ಮಂತ್ರಿಗಳಾಗಿ ಬಂದ ಮೇಲೆ ಇನ್ನೂ ಹೆಚ್ಚಾಗಿ ಮಾಡಬೇಕೆಂದು ಆಶೆ ಆಕಾಂಕ್ಷೆಗಳನ್ನು ಇಟ್ಟಿದ್ದಾರೆ. ಇಂತಹುದರ ಬಗ್ಗೆ ಒಳ್ಳೆಯ ಮಾತುಗಳನ್ನಾಡದೇ ಹತ್ತಾರು ವರ್ಷಗಳ ಕಾಲ, ಹಿಂದೆ ಅಧಿಕಾರದಲ್ಲಿದ್ದ ಜನ ಕೃಷ್ಣಾ-ಗೋದಾವರಿ ಆಗಲೀ, ಕಾವೇರಿ ಬೇಸಿನ್ನಾಗಲೀ ಈಗ್ಗೆ 5 ವರ್ಷಗಳ ಹಿಂದೆಯೇ ಪುರು ಮಾಡಬೇಕಾಗಿತ್ತು ಎಂದು ಅಗ್ಗೆ ಕಂಡು ಬಂದಿರಲಿಲ್ಲ. ಆದರೂ ಕೂಡ ಈ ಕೆಲಸ ಈಗ ಮಾಡಬೇಕಾಗಿದೆ ಎಂದು ನಮ್ಮ ಮುಖ್ಯ ಮಂತ್ರಿಗಳು ಆಗಲೇ ಕಟ್ಟುವುದಕ್ಕೆ ಕೇಂದ್ರ ನೆರವು ಕೇಳಿದ್ದಾರೆ.

ಶ್ರೀ ಎನ್. ಶಿವಪ್ಪ.—ಈಗ್ಗೆ ಐದು ವರ್ಷಗಳ ಹಿಂದೆಯೂ ಕಾಂಗ್ರೆಸ್ಸಿನ ಸರಕಾರವಿರಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಕಾಂಗ್ರೆಸ್ಸು ಸರಕಾರದಲ್ಲೇ ಆಗಲೀ ಯಾರಿಂದ ಹೆಚ್ಚಿಗೆ ಟೀಕೆ ಬರುತ್ತಿತ್ತು ಎನ್ನುವುದನ್ನು ತಮಗೆ ತಿಳಿಸುತ್ತೇನೆ. ಆ ಪೊತ್ತಿನ ಸ್ಥಿತಿಯಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಿದ್ದರೆ ಐದು ವರ್ಷಗಳಾಗುತ್ತಿತ್ತು ಇಷ್ಟು ಹೊತ್ತಿಗೆ ತೀವ್ರವಾಗಿ ಮುಗಿಯಬಹುದಾಗಿತ್ತು.

ಶ್ರೀ ಎಸ್. ಎಂ. ಕೃಷ್ಣ.—ಐದು ವರ್ಷ ಕಾಲ ಆ ಸರಕಾರ ಕೆಲಸ ಮಾಡಲಿಲ್ಲ ಎಂದು ತಮ್ಮ ಅಭಿಪ್ರಾಯವೇನು ?

ಶ್ರೀ ಬಿ. ರಾಚಯ್ಯ.—ಕೆಲಸ ಸಾಲದು ಎಂದು ಹೇಳಿದ್ದು ಈ ಸಂಸ್ಥಾನದಲ್ಲಿ ಪ್ರತಿವರ್ಷವೂ ಆಯವ್ಯಯದ ಅಂದಾಜು ಬಂದಾಗ ಹೊಸತೆರಿಗೆಗಳು ಬರುತ್ತಿದ್ದುವು. ಆದರೆ ಈ ವರ್ಷ ಕೇಂದ್ರ ಸರಕಾರದವರು ತೆರಿಗೆಗಳನ್ನು ಹಾಕಿರುವುದರಿಂದ ಈ ಪ್ರಾಂತಸರಕಾರ ಯಾವ ತೆರಿಗೆಯನ್ನೂ ಹಾಕುವುದಕ್ಕೆ ಹೋಗದೆ, ಸ್ವಲ್ಪ ಮಟ್ಟಿಗೆ ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಹಣವನ್ನು ಕೂಡಿಸಬೇಕೆಂದು ಮಾಡುತ್ತಿದ್ದಾರೆ. ದೇಶ ಕಟ್ಟತಕ್ಕ ಈ ಕಾಲದಲ್ಲಿ ಬಹುಶಃ ಇನ್ನು ಹತ್ತುವರ್ಷಗಳ ಹಿಂದಿನಿಂದಲೂ ಒಂದು ತೆರಿಗೆ ಕಂದಾಯವನ್ನು ಬರುವಂತೆ ಮಾಡಿಕೊಂಡಿದ್ದರೂ ಇನ್ನೂ ಹೆಚ್ಚಾಗಿ ನೀರಾವರಿ ಯೋಜನೆಗಳಾಗಲೀ ಬೆಳೆದು ಬರಲಿಲ್ಲ. ದೇಶದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕಾಗಿದ್ದರೆ, ಅದಕ್ಕೆ ತಕ್ಕಂತೆ ತೆರಿಗೆಗಳನ್ನು ಏರಿಸಲೇ ಬೇಕಾಗುತ್ತದೆ. ತೆರಿಗೆ ಹಾಕಬೇಕಾದರೆ ನಮ್ಮ ಜನತೆಯ ಮೇಲೆ ಹೊರೆ ಹೆಚ್ಚಾಗುತ್ತದೆ ಎಂದು ಕಟುವಾಗಿ ಟೀಕೆ ಮಾಡುವುದಕ್ಕೆ ಬರುವುದಿಲ್ಲ. ಯಾವ ಕಾಲದಲ್ಲಿ ಬರುವುದಿಲ್ಲ ಎಂದರೆ ಅವರು ಕೊಡತಕ್ಕ ಹಣ ಲಾಭದಾಯಕವಾಗಿ ದುರುಪಯೋಗವಾಗದೇ ಅವರ ಅಭಿವೃದ್ಧಿಗೋಸ್ಕರವೇ ಹೆಚ್ಚಾಗಿ ಖರ್ಚುಮಾಡುವುದಾದರೆ ಆಗ ಅವರು ಹಿಂದು ಮುಂದು ನೋಡುವುದಿಲ್ಲ. ನನಗಾದರೂ ಕೂಡ ಸ್ವಲ್ಪ ಮಟ್ಟಿಗೆ ತಿಳಿದಿರುವಂತೆ ಹೊಸ ಯೋಜನೆಗಳನ್ನು ಕೈಗೊಂಡ ಕಾಲದಲ್ಲಿ, ನೀರಾವರಿ ಯೋಜನೆಗಳಿಗಾಗಿ ಸಾಲವನ್ನು ತೆಗೆದುಕೊಳ್ಳಿ, ನಾವು ಅಡ್ವಾನ್ಸು ಮಾಡುತ್ತೇವೆ ಎಂದು ಕೆಲವರು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೂ ಉಂಟು. ಅವರು ಕೊಟ್ಟ ಹಣಕ್ಕೆ ಬಡ್ಡಿ ಕೊಟ್ಟರೆ ಸಾಕೆಂದು ಹೇಳಿ ಕೆಲಸ ಮುಗಿದ ಮೇಲೆ Constitution and Water Rateಗಳನ್ನು ಕೊಡುವಾಗ ರೈತರಿಂದ ವಜಾ ಮಾಡಿಕೊಂಡು ದುಡ್ಡನ್ನು ವಾಪಸು ಕೊಡಬಹುದು. ತೆರಿಗೆ ಹಾಕುವುದಾದರೆ ಜನ ಕೈಬಿಟ್ಟು ಬಿಡುತ್ತಾರೆ ಎಂದು ಹೆದರಬೇಕಾದ ಪ್ರಮೇಯವಿಲ್ಲ. ಒಟ್ಟಿನಲ್ಲಿ ಎಲ್ಲಿ ತೆರಿಗೆಯನ್ನು ಹಾಕಬೇಕೋ ಅಲ್ಲಿ ತೆರಿಗೆ ಹಾಕಲೇಬೇಕು. ಆದರೆ ಇವೊತ್ತು ಬೆಟರುಮೆಂಟು ವಾಟರು ರೇಟು ಇವನ್ನು ರೈತರುಗಳು ಕೊಡದೆ ಐದು ವರ್ಷಗಳಾದರೂ ಅದನ್ನು ಮುಂದುವರಿಸಿಕೊಂಡು ಹೋಗತಕ್ಕ ಸ್ಥಿತಿ ಒಳ್ಳೆಯದಲ್ಲ.

ಆ ವಿಷಯವನ್ನು ಸಂಬಂಧಪಟ್ಟ ಹಣಕಾಸಿನ ಮಂತ್ರಿಗಳು ತಿಳಿಸುತ್ತಾರೆ. ಈಗ ನನಗೆ ಸಂಬಂಧಪಟ್ಟ ಕೆಲವು ವಿಷಯ ಪ್ರಸ್ತಾಪಮಾಡಿ ನನ್ನ ಮಾತು ಮುಗಿಸಬೇಕೆಂದಿದ್ದೇನೆ. ಅರಣ್ಯ ಇಲಾಖೆಯ ಬಗ್ಗೆ ಒಬ್ಬಿಬ್ಬರು ಮಹನೀಯರು ಮಾತನಾಡಿದ್ದಾರೆ. ಕಾಡನ್ನು ಹೆಚ್ಚಿಗೆ ಬೆಳೆಸಬೇಕು, ಅದರಿಂದ ಹೆಚ್ಚಿನ ಉತ್ಪತ್ತಿ ತೆಗೆದುಕೊಳ್ಳಬೇಕು, ಆ ರೀತಿ ಮಾಡಿರತಕ್ಕಂಥಾದ್ದು ಸಂತೋಷ ಎಂದು ಒಬ್ಬಿಬ್ಬರು ಮಹನೀಯರು ತಿಳಿಸಿದ್ದಾರೆ. ಅವರಿಗೆ ನಾನು ಧ್ಯನವಾದಗಳನ್ನು ಅರ್ಪಿಸುತ್ತೇನೆ. ಈ ದೇಶದಲ್ಲಿ 13,000 ಚದುರ ಮೈಲಿ ಕಾಡು ಇದೆ. ಹೋದವರ್ಷ ಎಂಟು ಕೋಟಿ ರೂಪಾಯಿ ವರಮಾನ ಬಂದಿದೆ. ಕಳೆದ ಯೋಜನೆಗಳಲ್ಲಿ 2 ಲಕ್ಷ 39 ಸಾವಿರ ಎಕರೆ ಹೊಸ ಪ್ಲಾಂಟೇಷನ್ ಮಾಡಿದೆ. ಕಚ್ಚಾಪದಾರ್ಥಗಳಿಂದ ಹೊಸ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಹೆಚ್ಚಿನ ಗಮನ ಕೊಟ್ಟಿಲ್ಲವೆಂದು ಒಬ್ಬಿಬ್ಬರು ಮಹನೀಯರು ತಿಳಿಸಿದರು. ಅರಣ್ಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳ ವಿಷಯದಲ್ಲಿ ಅಂಕಿ ಸಂಖ್ಯೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಮೈಸೂರು ಪೇಪರ್ ಮಿಲ್ಸ್

